ಇವೆ. ಇದನ್ನು ಒಂದು ಬಾರಿ ಮಾಡಲು ಸಾಧ್ಯವಾದರೆ, ಇತರ ಅಂಶಗಳು ಸಹಜವಾಗಿಯೇ ಕಾರ್ಪೊರೇಟ್ ರೈತರ ಗಮನ ಸೆಳೆಯುತ್ತವೆ. ಹಾಗೂ ಅವರು ಅದರಲ್ಲಿ ವ್ಯಾಪಾರಿ ತರ್ಕವನ್ನು ವಿವೇಚಿಸಿ ಅಗತ್ಯ ನಿರ್ಧಾರ ಕೈಗೊಳ್ಳುತ್ತಾರೆ.

**ಗಮನಿಸಬೇಕಾದ ಇತರ ಕ್ಷೇತ್ರಗಳು**

ಕೃಷಿಕ್ಷೇತ್ರದಲ್ಲಿ ಪ್ರಮುಖವಾದ ಒಂದಕ್ಕೊಂದು ಸಂಪರ್ಕ ಹೊಂದಿರುವ ಇತರ ಸಮಸ್ಯೆಗಳ ಬಗ್ಗೆಯೂ ಸರ್ಕಾರ ಗಮನ ಹರಿಸಬೇಕಾಗಿದೆ. ಉದಾಹರಣೆಗೆ:

1. ಕೃಷಿ ಕ್ಷೇತ್ರದಲ್ಲಿ ಸುಸ್ಥಿರ ಅಂಶಗಳಿಗೆ ಒತ್ತು ನೀಡುವ ಕೃಷಿನೀತಿಯನ್ನು ಜಾರಿಗೊಳಿಸುವುದು. ವಾಣಿಜ್ಯೀಕರಣದ ಹಿನ್ನೆಲೆಯಲ್ಲಿ ಮತ್ತು ಖಾಸಗಿ ವಲಯ ಕೃಷಿಕ್ಷೇತ್ರಕ್ಕೆ ಲಗ್ಗೆ ಇಡುವ ಹಿನ್ನೆಲೆಯಲ್ಲಿ ಇದು ಇದು ಪಕ್ಷಪಾತದ ಕ್ರಮವಾಗಬಹುದು.
2. ಹವಾಮಾನ ಸಂಬಂಧಿ ಅನಿಶ್ಚಿತತೆಗಳು ಮತ್ತು ಹವಾಮಾನ ಬದಲಾವಣೆ ಅಪಾಯ.
3. ಸಮರ್ಪಕ ಮಾರುಕಟ್ಟೆ– ಆಧರಿತ ವಿಮಾ ಚೌಕಟ್ಟನ್ನು ಅಭಿವೃದ್ಧಿಪಡಿಸುವುದು.
4. ಧೀರ್ಘಾವಧಿ ಉದ್ಯೋಗ ಸೃಷ್ಟಿ ಯೋಜನೆಯನ್ನು ಜಾರಿಗೊಳಿಸುವುದು. ಇದು ಬಡತನ ರೇಖೆಗಿಂತ ಕೆಳಗಿರುವವರಿಗೆ ಮತ್ತು ನಿರುದ್ಯೋಗಿಗಳಿಗೆ ಲಾಭದಾಯಕ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡುವುದು. ಅಂದರೆ ಈಗ ಕೃಷಿಕ್ಷೇತ್ರವನ್ನೇ ನೆಚ್ಚಿಕೊಂಡಿರುವ ಅಧಿಕ ಮಂದಿಗೆ ಪರ್ಯಾಯ ವ್ಯವಸ್ಥೆ ಕಲ್ಪಿಸುವುದು.

**ಉಪಸಂಹಾರ**

ಸಮಗ್ರವಾಗಿ, ಎರಡನೇ ಹಸಿರು ಕ್ರಾಂತಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಮುಂದಿನ ಕಾರ್ಯಯೋಜನೆಯನ್ನು ರೂಪಿಸುವ ಅಗತ್ಯವಿದೆ. ಇದಕ್ಕೆ ತಕ್ಕುದಾದ ಕೃತಿ ನೀತಿ ಇಂದಿನ ತುರ್ತು ಅಗತ್ಯ. ಅದು ಭಾರತದ ಕೃಷಿ ಕ್ಷೇತ್ರವನ್ನು ಭಾದಿಸುತ್ತಿರುವ ಎಲ್ಲ ಸಮಸ್ಯೆಗಳನ್ನೂ ಗಮನದಲ್ಲಿಟ್ಟುಕೊಂಡು ರೂಪಿಸಿದ ನೀತಿಯಾಗಿರಬೇಕು. ಅಂಥ ಪ್ರಮುಖ ಅಂಶಗಳೆಂದರೆ:

1. ಜೈವಿಕ ಹಸ್ತಕ್ಷೇಪದ ಮೂಲಕ ಕೃಷಿ ಉತ್ಪಾದನೆಯ ಸುಸ್ಥಿರ ಅಭಿವೃದ್ಧಿ.
2. ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ
3. ಸಾಲ, ದಾಸ್ತಾನು, ಮಾರುಕಟ್ಟೆ ಹಾಗೂ ವಿಮೆ ಇತ್ಯಾದಿ.

ಬಹುಬ್ರಾಂಡ್ ಚಿಲ್ಲರೆ ಮಾರುಕಟ್ಟೆ ಕ್ಷೇತ್ರದಲ್ಲಿ ನೇರ ವಿದೇಶಿ ಬಂಡವಾಳ ಹೂಡಿಕೆಗೆ ಸರ್ಕಾರ ಕೈಗೊಂಡಿರುವ ನಿರ್ಧಾರ ಈ ನಿಟ್ಟಿನಲ್ಲಿ ಸರಿಯಾದ ಹೆಜ್ಜೆ. ಭಾರತದ ಕೃಷಿಕ್ಷೇತ್ರ ಇಂದಿಗೂ ದೇಶದ ಆರ್ಥಿಕತೆಯ ಅಸಂಘಟಿತ ಕ್ಷೇತ್ರ. ಇದು ಬಂಡವಾಳವನ್ನಷ್ಟೇ ನಿರೀಕ್ಷಿಸುವುದಲ್ಲದೇ, ತಜ್ಞ ಅನುಭವ ಹಾಗೂ ಉದ್ಯಮಶೀಲರನ್ನು ಕೂಡಾ ನಿರೀಕ್ಷಿಸುತ್ತಿದೆ. ವಿದೇಶಿ ಹೂಡಿಕೆದಾರರು ಇದಕ್ಕೆ ಅಗತ್ಯವಾದ ಉದ್ಯಮಶೀಲತೆಯನ್ನು ತಂದುಕೊಡಬಲ್ಲರು. ಅದಾಗ್ಯೂ ರಾತ್ರೋರಾತ್ರಿ ಪವಾಡಗಳನ್ನು ಸೃಷ್ಟಿಸಲು ಸಾಧ್ಯವಿಲ್ಲ. ಅದಕ್ಕೆ ಸಮಯಾವಕಾಶ ಬೇಕಾಗಬಹುದು. ಅಂತೆಯೇ ಭಾರತದ ವಿದ್ಯುತ್ ಕ್ಷೇತ್ರಕ್ಕೆ ಎನ್ರಾನ್ ಪ್ರವೇಶಿಸಿದ್ದು ದೊಡ್ಡ ಸುದ್ದಿಯಾಯಿತು. ಅದಾಗ್ಯೂ ಎನ್ರಾನ್‌ನ ಎಫ್‌ಡಿಐ ಹೂಡಿಕೆ ಏನಾಯಿತು ಎನ್ನುವುದು ಎಲ್ಲರಿಗೂ ತಿಳಿದ ವಿಚಾರವೇ ಆಗಿದೆ. ವಿದ್ಯುತ್ ಕ್ಷೇತ್ರದಲ್ಲಿ ಸಕಾಲಿಕ ಸುಧಾರಣೆಗಳನ್ನು ಜಾರಿಗೊಳಿಸದ ಹಿನ್ನೆಲೆಯಲ್ಲಿ ದೇಶೀಯ ಹಾಗೂ ವಿದೇಶಿ ಹೂಡಿಕೆದಾರರನ್ನು ಆ ಕ್ಷೇತ್ರ ಕಳೆದುಕೊಂಡಿತು. ಆದರೆ ಎಲ್ಲ ಹೂಡಿಕೆದಾರರೂ ಯಾವುದೇ ಕ್ಷೇತ್ರವನ್ನು ಪ್ರವೇಶಿಸುವುದಾದರೂ, ಗಳಿಕೆಯ ದೃಷ್ಟಿಕೋನವನ್ನೇ ನೋಡುತ್ತಾರೆ ಎನ್ನುವುದು ವಾಸ್ತವ.

### 16. ಬದಲಾಗುತ್ತಿರುವ ಪುರುಷರ ಹಾಗೂ ಮಹಿಳೆಯ ಪಾತ್ರ

ಇದರಲ್ಲಿ ಪ್ರಮುಖವಾಗಿ ಅಭಿವೃದ್ಧಿಪಡಿಸಬೇಕಾದ ಅಂಶಗಳೆಂದರೆ:

1. ಪುರುಷ ಹಾಗೂ ಮಹಿಳೆಯ ಜವಾಬ್ದಾರಿಗಳ ಪ್ರಾಚೀನ ಪರಿಕಲ್ಪನೆ.
2. ಪಾತ್ರ ಬದಲಾಗಲು ಕಾರಣವಾದ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳು
3. ಕೂಡುಕುಟುಂಬ ವ್ಯವಸ್ಥೆ ನಿಧಾನವಾಗಿ ವಿನಾಶದ ಅಂಚು ತಲುಪುತ್ತಿರುವುದು.
4. ಪಾತ್ರ ಬದಲಾವಣೆಯ ಪ್ರಕ್ರಿಯೆ ಸುಲಭವಲ್ಲ
5. ಬದಲಾವಣೆಯ ಅಗತ್ಯತೆಗಳು ಸ್ಥಿತಿಸ್ಥಾಪಕತ್ವಕ್ಕೆ ಕಾರಣವಾಗಿವೆ.
6. ಇಂಥ ಸ್ಥಿತಿಸ್ಥಾಪಕತ್ವ ನಗರ ಪ್ರದೇಶಕ್ಕಿಂತ ಗ್ರಾಮೀಣ ಪ್ರದೇಶದಲ್ಲಿ ಅನಿವಾರ್ಯ.
7. ಇಂಥ ಬದಲಾಗುತ್ತಿರುವ ಪಾತ್ರವನ್ನು ಒಪ್ಪಿಕೊಳ್ಳಬೇಕು ಮತ್ತು ಉತ್ತೇಜಿಸಬೇಕು.

ಸಾಮಾಜಿಕ ಬದಲಾವಣೆ ಸಾರ್ವತ್ರಿಕ ಅಂಶ. ಇದು ಯಾವುದೇ ಸಮಾಜದ ಅವಿಭಾಜ್ಯ ಅಂಗ. ಒಂದು ನಿರ್ದಿಷ್ಟ ಕ್ಷೇತ್ರದ ಬದಲಾವಣೆ ಸಮಾಜದ ಇತರ ಕ್ಷೇತ್ರಗಳ ಮೇಲೆಯೂ ಸಹಜವಾಗಿಯೇ ಪ್ರಭಾವ ಬೀರುತ್ತದೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಪುರುಷ ಹಾಗೂ ಮಹಿಳೆಯರು ಆಧುನಿಕ ಜಗತ್ತಿನಲ್ಲಿ ನಿರ್ವಹಿಸುವ ಪಾತ್ರದಲ್ಲಿ ಆಗಿರುವ ಬದಲಾವಣೆ ಮತ್ತು ಈ ವಿಚಾರದಲ್ಲಿ ಕಂಡುಬರುತ್ತಿರುವ ಸ್ಥಿತಿಸ್ಥಾಪಕತ್ವ.

ಪ್ರಾಚೀನ ಸಮಾಜದಲ್ಲಿ ಪುರುಷರು ಹಾಗೂ ಮಹಿಳೆಯರಿಗೆ ನಿರ್ದಿಷ್ಟ ಹಾಗೂ ಸಂಕುಚಿತ ಪಾತ್ರಗಳನ್ನು ನೀಡಲಾಗಿತ್ತು. ಪ್ರತಿಯೊಂದು ಗುಣಲಕ್ಷಣಗಳು ಹಾಗೂ ಇತರ ಅಂಶಗಳನ್ನು ಪುರುಷರಿಗೆ ಸೀಮಿತವಾದ ಹಾಗೂ ಮಹಿಳೆಯರಿಗೆ ಸೀಮಿತವಾದ ಲಕ್ಷಣಗಳು


www.shikarat.com

ಎಂದು ಪರಿಗಣಿಸಲಾಗುತ್ತಿತ್ತು. ಮನುಷ್ಯ ಸಹಜವಾಗಿ ಬೇಟೆಗಾರ ಮತ್ತು ಕುಟುಂಬದ ಮೂಲಭೂತ ಅಗತ್ಯವಾದ ಆಹಾರವನ್ನು ಸಂಪಾದಿಸುವ ಜವಾಬ್ದಾರಿ ಆತನದ್ದಾಗಿತ್ತು. ಆದರೆ ಮಹಿಳೆಯರು ಮಕ್ಕಳನ್ನು ಹೆರುವ ಯಂತ್ರ ಮತ್ತು ಇಡೀ ಕುಟುಂಬವನ್ನು ಪೋಷಿಸಿಕೊಂಡು ಹೋಗುವ ಜವಾಬ್ದಾರಿಯನ್ನು ಮಹಿಳೆಯರಿಗೆ ವಹಿಸಲಾಗಿತ್ತು. ಇತ್ತೀಚಿನವರೆಗೂ ಮಹಿಳೆಯರನ್ನು ಪುರುಷರ ಲೈಂಗಿಕ ಆಸಕ್ತಿಗಳನ್ನು ತಣಿಸುವ ಭೋಗವಸ್ತು. ಮಹಿಳೆಯರು ಇರುವುದೇ ಪುರುಷರಿಗೆ ಲೈಂಗಿಕ ಸುಖ ನೀಡಲು ಎಂಬ ಮನೋಭಾವ ಬಹಳಷ್ಟು ಸಮುದಾಯಗಳಲ್ಲಿ ಇತ್ತು. ಇದು ಸಹಜವಾಗಿಯೇ ಪುರುಷಪ್ರಧಾನ ಸಮಾಜದ ಪರಿಕಲ್ಪನೆ.

ಇಂದು ಸಮಾಜದಲ್ಲಿ ಕಂಡುಬರುತ್ತಿರುವ ಇಂಥ ಪಾತ್ರಗಳ ಬದಲಾವಣೆ ಹಾಗೂ ಸ್ಥಿತಿಸ್ಥಾಪಕತ್ವದ ಮೂಲವನ್ನು ಸಾಮಾಜಿಕ ಸಂರಚನೆಯಲ್ಲಿ ಆದ ಬದಲಾವಣೆಯಲ್ಲಿ ಗುರುತಿಸಬಹುದು. ಉದಾಹರಣೆಗೆ ಆರ್ಥಿಕ ಅಂಶಗಳು. ವೈದ್ಯಕೀಯ ಕ್ಷೇತ್ರದಲ್ಲಿ ಆಗಿರುವ ಕ್ರಾಂತಿಕಾರಿ ಬದಲಾವಣೆಗಳು ಮೌಲ್ಯವ್ಯವಸ್ಥೆಯಲ್ಲಿ ಬದಲಾವಣೆಗೂ ಕಾರಣವಾಗಿದೆ. ಇದು ಸಮಾಜದಲ್ಲೂ ಬದಲಾವಣೆಗೆ ಕಾರಣವಾಗಿದ್ದು, ಕೂಡುಕುಟುಂಬದ ಬದಲಾಗಿ ಅಣುಕುಟುಂಬಕ್ಕೆ ಆದ್ಯತೆ ನೀಡಲು ಕಾರಣವಾಗಿದೆ. ಏಕೆಂದರೆ ಕೂಡುಕುಟುಂಬಗಳಲ್ಲಿ ಅಗತ್ಯತೆಗಳು ವ್ಯಾಪಕವಾಗಿವೆ ಎಂಬ ನಂಬಿಕೆ ಬೆಳೆದುಬಿಟ್ಟಿದೆ. ಈ ಹಿನ್ನೆಲೆಯಲ್ಲಿ ಆರ್ಥಿಕ ಹಾಗೂ ಗೃಹಕೃತ್ಯದ ಜವಾಬ್ದಾರಿ ಬದಲಾಗಿದೆ.

ಹಿಂದೆ ಕೂಡುಕುಟುಂಬ ವ್ಯವಸ್ಥೆಯಲ್ಲಿ, ವ್ಯಾಪಕವಾಗಿ ಹಾಗೂ ಪ್ರತಿಯೊಬ್ಬರ ಕರ್ತವ್ಯ ಮತ್ತು ಜವಾಬ್ದಾರಿಗಳಲ್ಲೂ ನಿರ್ದಿಷ್ಟ ವರ್ಗೀಕರಣ ಇತ್ತು. ಉದಾಹರಣೆಗೆ ಮಹಿಳೆಯರು ಗೃಹಕೃತ್ಯಗಳನ್ನು ನಿರ್ವಹಿಸುತ್ತಿದ್ದರು. ಪುರುಷರು ಹಣಕಾಸು ವ್ಯವಹಾರವನ್ನು ನಿರ್ವಹಿಸುತ್ತಿದ್ದರು. ಆದರೆ ಇಂದು ಅಣುಕುಟುಂಬಗಳ ಪರಿಣಾಮವಾಗಿ ಇಂಥ ವರ್ಗೀಕರಣ ಸಾಧ್ಯವಿಲ್ಲ. ಪುರುಷ ಇಂದು ಕುಟುಂಬದ ಏಕೈಕ ಆದಾಯ ತರುವ ವ್ಯಕ್ತಿಯಾಗಿಲ್ಲ. ಹಾಗೂ ಮಹಿಳೆ ಕೇವಲ ಗೃಹಕೃತ್ಯಕ್ಕೇ ತನ್ನ ಜವಾಬ್ದಾರಿಯನ್ನು ಸೀಮಿತಗೊಳಿಸಿಕೊಂಡಿಲ್ಲ.

ಪುರುಷ ಹಾಗೂ ಮಹಿಳೆಯರ ಪಾತ್ರಗಳಲ್ಲಿ ಆಗಿರುವ ಬದಲಾವಣೆ ಹಾಗೂ ಸ್ಥಿತಿಸ್ಥಾಪಕತ್ವ ಮುಖ್ಯವಾಗಿ ಆರ್ಥಿಕ ಬಾಧ್ಯತೆಗಳಿಂದ ಬಂದದ್ದು. ಕೂಡುಕುಟುಂಬ ವ್ಯವಸ್ಥೆಯಲ್ಲಿದ್ದ ಹಣಕಾಸು ಭದ್ರತೆ ಮನೋಭಾವ ಇದೀಗ ಪುಟ್ಟ ಕುಟುಂಬಗಳಲ್ಲಿ ಇಲ್ಲ. ಜತೆಗೆ ಜೀವನವೆಚ್ಚ ಒಂದೇ ಸಮನೆ ಏರುತ್ತಿದೆ. ಗ್ರಾಹಕ ಸಂಸ್ಕೃತಿಯಿಂದಾಗಿ ಪ್ರತಿ ಕುಟುಂಬಗಳ ಬೇಡಿಕೆಗಳು ಕೂಡಾ ಹೆಚ್ಚುತ್ತಿದ್ದು, ಇದನ್ನು ಪೂರೈಸಿಕೊಳ್ಳುವ ನಿಟ್ಟಿನಲ್ಲಿ ಹೆಚ್ಚು ಹೆಚ್ಚು ಸಂಪಾದನೆಯ ಮನೋಭಾವ ಬೆಳೆದುಬಂದಿದೆ. ಕೇವಲ ಪುರುಷರ ಆದಾಯವನ್ನಷ್ಟೇ ನೆಚ್ಚಿಕೊಳ್ಳುವ ಪರಿಸ್ಥಿತಿ ಬಹಳಷ್ಟು ಕುಟುಂಬಗಳಲ್ಲಿ ಇಲ್ಲ.

ಮನೆಯ ಅಗತ್ಯತೆಗಳನ್ನು ಪೂರೈಸಿಕೊಳ್ಳುವ ಸಲುವಾಗಿ ಹಾಗೂ ಬೆಳೆಯುತ್ತಿರುವ ಬೇಡಿಕೆಗಳಿಗೆ ಅನುಗುಣವಾಗಿ ಆದಾಯ ಹೆಚ್ಚಿಸಿಕೊಳ್ಳಲು ಮಹಿಳೆಯೂ ಆದಾಯ ಗಳಿಸುವುದು ಅನಿವಾರ್ಯ ಎಂಬ ಸ್ಥಿತಿ ನಿರ್ಮಾಣವಾಗಿದೆ. ಕುಟುಂಬದ ಅಗತ್ಯ ಪೂರೈಸಲು ಹೆಚ್ಚುವರಿ ಆದಾಯ ಗಳಿಸುವುದು ಬಹುತೇಕ ಗೃಹಿಣಿಯರ ಸ್ವಾಭಾವಿಕ ವೃತ್ತಿಯಾಗಿದೆ. ಇದು ಸಹಜವಾಗಿಯೇ ಪುರುಷರ ಜವಾಬ್ದಾರಿಗಳು ಹೆಚ್ಚಲು ಕೂಡಾ ಕಾರಣವಾಗಿದೆ. ಉದಾಹರಣೆಗೆ ಗಂಡ ಹಾಗೂ ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗುವ ಹಿನ್ನೆಲೆಯಲ್ಲಿ ಮತ್ತು ನಿಗದಿತ ಅವಧಿಯೊಳಗೆ ಗೃಹಕೃತ್ಯಗಳನ್ನು ನಿರ್ವಹಿಸಬೇಕಾದ ಹಿನ್ನೆಲೆಯಲ್ಲಿ ಮನೆಕೆಲಸಗಳಲ್ಲಿ ಉದ್ಯೋಗಸ್ಥ ಮಹಿಳೆಯರಿಗೆ ಸಹಕರಿಸುವುದು ಪುರುಷರಿಗೂ ಅನಿವಾರ್ಯವಾಗಿಬಿಟ್ಟಿದೆ.

ಭೌಗೋಳಿಕ, ಸಾಂಸ್ಕೃತಿಕ ಬದಲಾವಣೆಗಳು, ಸೂಕ್ಷ್ಮ ಹಾಗೂ ದೊಡ್ಡ ಸ್ತರದ ಆರ್ಥಿಕತೆಯು ಜವಾಬ್ದಾರಿಗಳ ಬದಲಾವಣೆಗೂ ಕಾರಣವಾಗಿದೆ. ಆದರೆ ಇಂಥ ಜವಾಬ್ದಾರಿಗಳ ವರ್ಗಾವಣೆ ಖಂಡಿತವಾಗಿಯೂ ಸುಲಭಸಾಧ್ಯವಲ್ಲ. ಇದು ಪ್ರತಿರೋಧ ಹಾಗೂ ಸಂಘರ್ಷಕ್ಕೂ ಕಾರಣವಾಗಿದೆ.

ಪುರುಷರ ಜವಾಬ್ದಾರಿಗಳನ್ನು ಮಹಿಳೆಯರು ಹೆಚ್ಚು ಸಂತೋಷದಿಂದ ಮತ್ತು ಬದ್ಧತೆಯ ಹಿನ್ನೆಲೆಯಲ್ಲಿ ನಿರ್ವಹಿಸುತ್ತಿದ್ದು, ಆದರೆ ಪುರುಷರ ವಿಚಾರದಲ್ಲಿ ಇದು ಸಂಪೂರ್ಣ ಸತ್ಯವಾಗುತ್ತಿಲ್ಲ. ಇಂದಿನ ಬದಲಾದ ಪರಿಸ್ಥಿತಿಯಲ್ಲಿ ಮಹಿಳೆಯರನ್ನು ಉತ್ತಮ ವೃತ್ತಿಪರ ಹಾಗೂ ಉತ್ತಮ ಗೃಹಿಣಿಯಾಗಿ ಬೆಳೆಸಲಾಗುತ್ತಿದ್ದು, ಮಹಿಳೆ ತನ್ನ ಹೆಚ್ಚಿದ ಜವಾಬ್ದಾರಿಯನ್ನಯ ಸಮರ್ಥವಾಗಿಯೇ ನಿಭಾಯಿಸುತ್ತಿದ್ದಾಳೆ. ಆದರೆ ಇಂದಿಗೂ ಪುರುಷರು ಕೇವಲ ವೃತ್ತಿಬಗ್ಗೆಯೇ ಹೆಚ್ಚಿನ ಗಮನ ಕೇಂದ್ರೀಕರಿಸುತ್ತಿರುವುದು ವಾಸ್ತವ.

ಸಾಮಾನ್ಯವಾಗಿ ಪುರುಷರು ತಮ್ಮ ಗೃಹಕೃತ್ಯದ ಜವಾಬ್ದಾರಿಯನ್ನು ಸ್ವೀಕರಿಸಲು ಸಿದ್ಧರಿಲ್ಲ. ಸ್ವೀಕರಿಸಿದರೂ ಪೂರ್ಣ ಪ್ರಮಾಣದಲ್ಲಿ ಅಲ್ಲ. ಪುರುಷರು ಗೃಹಕೃತ್ಯದ ಜವಾಬ್ದಾರಿ ನಿರ್ವಹಿಸುವುದನ್ನು ಮಹಿಳೆಯರು ಸಂತೋಷದಿಂದ ಸ್ವೀಕರಿಸುತ್ತಾರೆ ಮತ್ತು ಆ ನಿಟ್ಟಿನಲ್ಲಿ ಸಹಕಾರವನ್ನೂ ನೀಡುತ್ತಾರೆ. ಆದರೆ ಮಹಿಳೆ ಉದ್ಯೋಗಕ್ಷೇತ್ರದಲ್ಲಿ ಉನ್ನತಿ ಸಾಧಿಸುವ ಪ್ರಯತ್ನ ನಡೆಸಿದಾಗ ಪುರುಷ ಅದನ್ನು ಮತ್ಸರದ ಮನೋಭಾವದಿಂದ ನೋಡುತ್ತಾನೆ. ಮತ್ತು ಹಲವು ಪರಿಸ್ಥಿತಿಗಳಲ್ಲಿ ಅದಕ್ಕೆ ಪ್ರತಿರೋಧವನ್ನೂ ಒಡ್ಡುತ್ತಾನೆ. ಉದ್ಯೋಗ ಕ್ಷೇತ್ರ ಪುರುಷರ ಏಕಸ್ವಾಮ್ಯ ಎಂಬ ಮನೋಭಾವ ಇದಕ್ಕೆ ಮುಖ್ಯ ಕಾರಣ. ಆದ್ದರಿಂದ ಪುರುಷರು ತಮ್ಮ ಕ್ಷೇತ್ರದಲ್ಲಿ ದಕ್ಷತೆ ಮೆರೆಯಲು ಯಾವ ಅಡೆತಡೆಗಳೂ ಇಲ್ಲ. ಆದರೆ ಮಹಿಳೆಯರ ವಿಚಾರದಲ್ಲಿ ಇದು ಸಂಪೂರ್ಣ ಭಿನ್ನ.

ಮಹಿಳೆಯರ ಸಹಜ ಜವಾಬ್ದಾರಿಗಳು ಮನೆಯ ಚೌಕಟ್ಟಿನಿಂದ ಹೊರಬಂದು ಉದ್ಯೋಗ ಕ್ಷೇತ್ರದಲ್ಲೂ ಬೆಳೆದಿದ್ದು, ಶಿಕ್ಷಣದ ಕಾರಣದಿಂದ ಪುರುಷರು ಮತ್ತು ಮಹಿಳೆಯರ ಸಾಂಪ್ರದಾಯಿಕ ಜವಾಬ್ದಾರಿಗಳು ವೇಗವಾಗಿ ಬದಲಾಗುತ್ತಿವೆ. ಮುಕ್ತ ಹಾಗೂ ಸುಶಿಕ್ಷಿತ ಸಮಾಜ ಇಂಥ ಜವಾಬ್ದಾರಿಗಳ ವಿನಿಮಯಕ್ಕೆ ಮುಕ್ತ ಮನಸ್ಸು ಹೊಂದಿದೆ. ಏಕೆಂದರೆ ಅಭಿವೃದ್ಧಿಶೀಲ ಸಮಾಜದ ಸಮಾಜದ ಅಗತ್ಯತೆಯನ್ನು ಪೂರೈಸುವಲ್ಲಿ ಇದು ಅನಿವಾರ್ಯ ಕೂಡಾ. ಜವಾಬ್ದಾರಿಗಳ ನಿರ್ವಹಣೆಯಲ್ಲಿ ಸ್ಥಿತಿಸ್ಥಾಪಕತ್ವ ಇಲ್ಲದಿದ್ದರೆ ಗೃಹಕೃತ್ಯಗಳನ್ನು ನಿರ್ವಹಿಸುವುದು ಅಸಾಧ್ಯ ಎಂಬ ಪರಿಸ್ಥಿತಿ ನಿರ್ಮಾಣವಾಗಿಬಿಟ್ಟಿದೆ. ಇನ್ನೂ ಒಂದು ಹೆಜ್ಜೆ ಮುಂದಕ್ಕೆ ಹೋದರೆ, ಸಣ್ಣ ಕುಟುಂಬಗಳು ಇಂದು ಏಕ ಪೋಷಕರನ್ನು ಹೊಂದಿರುವ ಕುಟುಂಬಗಳಾಗಿ ಬದಲಾಗುತ್ತಿದ್ದು, ಇಂಥ ಸಂದರ್ಭದಲ್ಲಿ ಇಡೀ ಕುಟುಂಬದ ಜವಾಬ್ದಾರಿಯನ್ನು ಮಹಿಳೆಯರೇ ಹೊರಬೇಕಾಗುತ್ತದೆ.

ಸಮಾಜ ಅದರಲ್ಲೂ ಮುಖ್ಯವಾಗಿ ನಗರ ವ್ಯವಸ್ಥೆ, ಜವಾಬ್ದಾರಿಗಳ ವಿನಿಮಯವಿಲ್ಲದೇ ಮುನ್ನಡೆಯುವುದೇ ಸಾಧ್ಯವಿಲ್ಲ. ಆದರೆ ಕೆಲವೆಡೆ ಮಹಿಳೆಯರು ಕೆಲಸಕ್ಕೆ ಹೋಗುವುದಕ್ಕೆ ಇನ್ನೂ ಅಡೆತಡೆಗಳು ಮತ್ತು ಪ್ರತಿರೋಧಗಳು ಇರುವುದು ಸುಳ್ಳಲ್ಲ. ಪುರುಷರು ಅಡುಗೆ ಮನೆಗಳಲ್ಲಿ ಕೆಲಸ ಮಾಡುವುದು, ಮಹಿಳೆಯರು ತಡರಾತ್ರಿಯೂ ಕಚೇರಿಗಳಲ್ಲಿ ಕೆಲಸ ನಿರ್ವಹಿಸುವುದನ್ನು ಸಮಾಜ ಸ್ವೀಕರಿಸುವ ಹಂತ


www.shikarat.com

ಇನ್ನೂ ಅಭಿವೃದ್ಧಿಯಾಗಿಲ್ಲ. ಆದರೆ ಬದಲಾಗುತ್ತಿರುವ ಮನೋಪ್ರವೃತ್ತಿಗಳನ್ನು ನಾವು ಹಲವು ಕ್ಷೇತ್ರಗಳಲ್ಲಿ ಕಾಣಬಹುದಾಗಿದೆ. ಉದಾಹರಣೆಗೆ ಮಹಿಳೆಯರು ಪೈಲಟ್ ಕೆಲಸವನ್ನು ಸಮರ್ಥವಾಗಿ ನಿರ್ವಹಿಸುತ್ತಿರುವುದು, ಬಾಹ್ಯಾಕಾಶ ಕ್ಷೇತ್ರದಲ್ಲೂ ನೈಪುಣ್ಯ ಸಾಧಿಸಿರುವುದು ಕೆಲ ಉದಾಹರಣೆಗಳು ಮಾತ್ರ. ಇದರ ಜತೆಗೆ ಪುರುಷರು ಕೂಡಾ ಉತ್ತಮ ಪಾಕಶಾಸ್ತ್ರಜ್ಞರಾಗಿ, ಪ್ರಸಾದನ ಕಲಾವಿದರಾಗಿ ತಮ್ಮ ಸಾಮರ್ಥ್ಯವನ್ನು ತೋರಿಸುತ್ತಿದ್ದಾರೆ. ಪುರುಷರು ಹಾಗೂ ಮಹಿಳೆಯರ ನಡುವಿನ ಬದಲಾದ ಪಾತ್ರಗಳ ಸ್ಥಿತಿಸ್ಥಾಪಕತ್ವದ ಇನ್ನೊಂದು ನಿದರ್ಶನವೆಂದರೆ, ಬದಲಾಗುತ್ತಿರುವ ಜಾಹೀರಾತು ಕ್ಷೇತ್ರ. ಒಂದು ಕಾಲದಲ್ಲಿ ಮಹಿಳೆಯರನ್ನು ಜಾಹೀರಾತಿನಲ್ಲಿ ಬಳಸಿಕೊಂಡರೆ ಮಾತ್ರ ಉತ್ಪನ್ನಗಳು ಮಾರಾಟವಾಗುತ್ತವೆ ಎಂಬ ಪರಿಕಲ್ಪನೆ ಇದೀಗ ಬದಲಾಗಿದೆ.

ಇದೀಗ ಪುರುಷರು ಮತ್ತು ಮಹಿಳೆಯರು ಜಾಹೀರಾತು ಕ್ಷೇತ್ರದಲ್ಲಿ ಸಮಾನ ಅವಕಾಶ ಪಡೆಯುತ್ತಿದ್ದಾರೆ. ಜನತೆಯ ಖರೀದಿಯ ಮೇಲೆ ಪುರುಷರು ಕೂಡಾ ಪ್ರಭಾವ ಬೀರಬಹುದು ಎನ್ನುವುದುನ್ನು ಯಶಸ್ವಿ ಪುರುಷ ಜಾಹೀರಾತುಗಳು ತೋರಿಸಿಕೊಟ್ಟಿವೆ. ಉದಾಹರಣೆಗೆ ವಾಷಿಂಗ್ ಪೌಡರ್‌ನಂಥ ಗೃಹಬಳಕೆ ವಸ್ತುಗಳಿಗೂ ಪುರುಷರನ್ನು ಮಾಡೆಲ್‌ಗಳಾಗಿ ಬಳಸಿಕೊಳ್ಳಲಾಗುತ್ತಿದೆ. ಜತೆಗೆ ಕಾರ್ಪೊರೇಟ್ ಜಾಹೀರಾತುಗಳಲ್ಲಿ ಮಹಿಳೆಯರನ್ನು ಮಾಡೆಲ್‌ಗಳಾಗಿ ಬಳಸಿಕೊಳ್ಳಲಾಗುತ್ತಿದೆ.

ಸಾಮಾಜಿಕ ಹಾಗೂ ಆರ್ಥಿಕ ಒತ್ತಡಗಳಿಂದಾಗಿ ಜವಾಬ್ದಾರಿಗಳ ವಿನಿಮಯ ಅನಿವಾರ್ಯ ಎಂಬ ಸ್ಥಿತಿ ನಿರ್ಮಾಣವಾಗಿದ್ದು, ನಗರಗಳಲ್ಲಂತೂ ಇದು ಸಾರ್ವತ್ರಿಕವಾಗಿದೆ. ಗ್ರಾಮೀಣ ಪ್ರದೇಶಗಳಲ್ಲಿ, ಈ ಬದಲಾವಣೆಗೆ ಸುಧೀರ್ಘ ಅವಧಿ ಅಗತ್ಯ. ಇಂದಿನ ಪರಿಸ್ಥಿತಿಯಲ್ಲಿ ಗ್ರಾಮೀಣ ಪ್ರದೇಶದಲ್ಲೂ ಮಹಿಳೆಯರು ಪುರುಷರ ಜವಾಬ್ದಾರಿಗಳನ್ನು ಒಂದೊಂದಾಗಿ ತೆಗೆದುಕೊಳ್ಳುತ್ತಿದ್ದಾರೆ. ಆದರೆ ಇದಕ್ಕೆ ಪುರುಷರು ಸಹಕರಿಸುವುದು ಕಡಿಮೆ ಮತ್ತು ಮಹಿಳೆಯರ ಯಾವ ಜವಾಬ್ದಾರಿಗಳನ್ನೂ ಪೂರೈಸಲು ಗ್ರಾಮೀಣ ಪುರುಷರು ಸಿದ್ಧರಿಲ್ಲ.

ಪುರುಷರು ಹಾಗೂ ಮಹಿಳೆಯರ ನಡುವಿನ ಜವಾಬ್ದಾರಿಗಳ ವಿನಿಮಯದಲ್ಲಿ ಸ್ಥಿತಿಸ್ಥಾಪಕತ್ವ ಅನಿವಾರ್ಯ. ಎರಡೂ ವರ್ಗಗಳು ತಮ್ಮ ಜವಾಬ್ದಾರಿಯನ್ನು ಸಮರ್ಥವಾಗಿ ಮತ್ತು ಖುಷಿಯಿಂದ ನಿರ್ವಹಿಸುವಂತಾಗಬೇಕು. ಆದರೆ ಜೈವಿಕ ಪಾತ್ರಗಳನ್ನು ಪುರುಷ ಹಾಗೂ ಮಹಿಳೆಯರು ವಿನಿಮಯ ಮಾಡಿಕೊಳ್ಳಲು ಸಾಧ್ಯವಿಲ್ಲ. ಆದರೆ ಈಗ ಅಸ್ತಿತ್ವದಲ್ಲಿರುವ ತಾಂತ್ರಿಕ ಬದಲಾವಣೆಗಳ ಹಿನ್ನೆಲೆಯಲ್ಲಿ ಸಾಮಾಜಿಕ ಮತ್ತು ವೃತ್ತಿಕ್ಷೇತ್ರಗಳಲ್ಲಿ ಕೂಡಾ ಮನೋಭಾವ ಬದಲಾಗಬೇಕು. ಕೆಲ ವಿಭಾಗಗಳ ಜವಾಬ್ದಾರಿಯನ್ನು ನಿರ್ದಿಷ್ಟ ಲಿಂಗಿಗಳಷ್ಟೇ ನಿಭಾಯಿಸಬಲ್ಲರು ಎಂಬ ಮನೋಭಾವ ಬದಲಾಗಬೇಕು.

### 17. ಅಧಿಕ ಜನಸಂಖ್ಯೆಯ ಸಮಸ್ಯೆಗಳು

ಜನಗಣತಿಯ ಅಂಕಿ ಅಂಶಗಳ ಪ್ರಕಾರ, 2035ರ ವೇಳೆಗೆ ಭಾರತದ ಜನಸಂಖ್ಯೆ 145 ಕೋಟಿ ಆಗಲಿದೆ. ಆದ್ದರಿಂದ ಜನಸಂಖ್ಯೆಯಲ್ಲಿ ನಾವು ವಿಶ್ವದ ಅಗ್ರಗಣ್ಯ ರಾಷ್ಟ್ರವಾಗಲಿದ್ದೇವೆ. ಆದರೆ ಧನಾತ್ಮಕ ಅಂಶವೆಂದರೆ, ಮಾನವ ಸಂಪನ್ಮೂಲವನ್ನು ನಮ್ಮ ಸಾಮರ್ಥ್ಯವಾಗಿ ಬಳಸಿಕೊಳ್ಳಬೇಕು; ಇದನ್ನು ಹೊರೆ ಎಂದು ಪರಿಗಣಿಸಬಾರದು.

ವಾಸ್ತವವಾಗಿ ನಾವು ಇಂಥ ದೊಡ್ಡ ಸಂಖ್ಯೆಯ ಜನರಿಗೆ ಶಿಕ್ಷಣ ಮತ್ತು ಕೌಶಲವನ್ನು ನೀಡಿ, ಅರ್ಥಶಾಸ್ತ್ರಜ್ಞರು ಹೇಳುವಂತೆ ಮಾನವ ಸಂಪನ್ಮೂಲವಾಗಿ ಅಭಿವೃದ್ಧಿಪಡಿಸಲು ಸಾಧ್ಯತೆ ಇದೆಯೇ ಎನ್ನುವುದು ಪ್ರಶ್ನೆ. ಅದರಲ್ಲೂ ಮುಖ್ಯವಾಗಿ ಅಮರ್ತ್ಯ ಸೇನ್ ಹೇಳುವಂತೆ ಭಾರತದ ಜನಸಂಖ್ಯೆ, ಮಾನವ ಸಂಪನ್ಮೂಲವಾಗಿ ಅಭಿವೃದ್ಧಿಯಾದೀತೇ? ಬೃಹತ್ ಜನಸಂಖ್ಯೆಯನ್ನು ಸೂಕ್ತ ತರಬೇತಿ ಮತ್ತು ಕೌಶಲ ಅಭಿವೃದ್ಧಿಪಡಿಸುವ ಮೂಲಕ ಆಸ್ತಿಯಾಗಿ ಪರಿವರ್ತಿಸಿಕೊಳ್ಳಬಹುದು ಎನ್ನುವುದು ಒಪ್ಪಬಹುದಾಗಿದ್ದರೂ, ಒಂದು ಗರಿಷ್ಠ ಮಿತಿಯವರೆಗೆ ಮಾತ್ರ ಇದು ಕಾರ್ಯಸಾಧು. ನಿರ್ಧಿಷ್ಟ ಹಂತವನ್ನು ಮೀರಿದರೆ, ಇಂಥ ಮಾನವ ಸಂಪನ್ಮೂಲ ಕೂಡಾ ನಮ್ಮನ್ನು ವಿನಾಶದ ಅಂಚಿಗೆ ಕರೆದೊಯ್ಯುತ್ತದೆ ಎನ್ನುವುದನ್ನು ಅಲ್ಲಗಳೆಯಲಾಗದು.

ಒಂದು ನಿರ್ದಿಷ್ಟ ಮಟ್ಟಕ್ಕಿಂತ ಹೆಚ್ಚಿನ ಮಂದಿಯ ಬಯಕೆಗಳನ್ನು ನಮ್ಮ ನೈಸರ್ಗಿಕ ಸಂಪನ್ಮೂಲಗಳು ಈಡೇರಿಸಲಾರವು ಎನ್ನುವುದು ವಾಸ್ತವ. ಅಧಿಕ ಜನಸಂಖ್ಯೆಯಿಂದಾಗಿ ದೇಶದ ಎಲ್ಲ ಸಂಪನ್ಮೂಲಗಳ ಮೇಲೆಯೂ ಅಧಿಕ ಹೊರೆ ಬೀಳುತ್ತದೆ. ಆದ್ದರಿಂದ ಅಧಿಕ ಜನಸಂಖ್ಯೆ ಅಭಿವೃದ್ಧಿಗೂ, ನೈಸರ್ಗಿಕ ಸಂಪನ್ಮೂಲಕ್ಕೂ ಯಾವುದೇ ಸಂಬಂಧವಿಲ್ಲ. ಅದನ್ನು ನಾವು ನಿರ್ವಹಿಸುವ ಬಗೆ ಮಾತ್ರ ಪ್ರಮುಖ ಎನ್ನುವ ವಾದ ಅರ್ಥವಿಲ್ಲದ್ದು ಮತ್ತು ವಿವೇಕಶೂನ್ಯವಾದದ್ದು. ಖಂಡಿತವಾಗಿಯೂ ಅಸಮರ್ಪಕ ನಿರ್ವಹಣಾ ವ್ಯವಸ್ಥೆ ಸಂಪನ್ಮೂಲಗಳನ್ನು ಎಲ್ಲ ವರ್ಗಗಳ ನಡುವೆ ಸಮಾನವಾಗಿ ಹಂಚಲು ವಿಫಲವಾಗಿದೆ. ಇದರ ಪರಿಣಾಮವಾಗಿ ನಿರುದ್ಯೋಗ ಹಾಗೂ ಬಡತನ, ಕಡಿಮೆ ಖರೀದಿ ಸಾಮರ್ಥ್ಯದಂಥ ಸಮಸ್ಯೆಗಳು ಬಹುತೇಕ ಮಂದಿಯನ್ನು ಕಾಡುತ್ತಿವೆ. ಆದರೆ ಅಧಿಕ ಸಂಖ್ಯೆಯ ಜನ ಈ ಸಮಸ್ಯೆ ಮತ್ತಷ್ಟು ಉಲ್ಬಣಗೊಳ್ಳಲು ಕಾರಣರಾಗುತ್ತಾರೆ.

ಭಾರತದಲ್ಲಿ ಸದ್ಯಕ್ಕೆ ಇರುವ ಜನಸಂಖ್ಯೆಯ ಮಟ್ಟವನ್ನು ಗಮನಿಸಿದರೆ ಕೂಡಾ, ನಮ್ಮ ಜನ ಇನ್ನೂ ಮಾನವ ಸಂಪನ್ಮೂಲವಾಗಿ ಅಭಿವೃದ್ಧಿಯಾಗಿಲ್ಲ. ಈ ಪೈಕಿ ಬಹುತೇಕ ಮಂದಿ ಕೌಶಲವಿಲ್ಲದವರು, ಅಪೌಷ್ಟಿಕತೆಗೆ ಬಲಿಯಾದವರು ಮತ್ತು ಮತ್ತು ಆಧುನಿಕ ಕೈಗಾರಿಕೆಗಳಲ್ಲಿ


www.shikarat.com
Universal Coaching Centre

ಉದ್ಯೋಗ ಗಳಿಸಲು ಅರ್ಹತೆ ಇಲ್ಲದವರು. ಕೈಗಾರಿಕೆಗಳು ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಸುತ್ತಿಲ್ಲ ಎಂಬ ಆರೋಪ ಮಾಡುವುದರಲ್ಲಿ ಯಾವ ಅರ್ಥವೂ ಇಲ್ಲ. ಏಕೆಂದರೆ ಉದ್ಯೋಗ ಮಾರುಕಟ್ಟೆಯ ಅಗತ್ಯತೆ ಮತ್ತು ಲಭ್ಯತೆಯ ನಡುವೆ ದೊಡ್ಡ ಕಂದಕವಿದೆ. ಜನರು ಕೃಷಿಕ್ಷೇತ್ರದಿಂದ ಹೊರಬರಲು ಕೂಡಾ ಹೆಚ್ಚು ಕೌಶಲ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಗಮನ ಹರಿಸಬೇಕಾಗಿದೆ. ಕೇವಲ ಯೋಜನೆಗಳಿಗೆ ಹಣ ಎಸೆಯುವುದರಿಂದ ಮೇಲೆತ್ತುವ ಸಾಧನೆಯಾಗದು;

ಇಂದು ನಮ್ಮ ಆಸ್ಪತ್ರೆಗಳಲ್ಲಿ ಅರೆವೈದ್ಯಕೀಯ ಸಿಬ್ಬಂದಿಯ ಕೊರತೆ ಬಹುವಾಗಿ ಕಾಡುತ್ತಿದೆ. ಕೇವಲ ಹಳ್ಳಿಗಳ ಮಟ್ಟದಲ್ಲಿ ಮಾತ್ರವಲ್ಲದೇ ನಗರಗಳ ಮಟ್ಟದಲ್ಲಿಯೂ ಈ ಸಮಸ್ಯೆ ವ್ಯಾಪಕವಾಗಿದೆ. ನಮ್ಮ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಭವಿಷ್ಯದ ಸಂಪನ್ಮೂಲ (ಮಕ್ಕಳು) ಸೂಕ್ತ ಕಾಳಜಿ ಇಲ್ಲದೇ ಸಾಯುತ್ತಿವೆ. ಈ ಕಾಳಜಿಯ ಕೊರತೆಯ ಹಿಂದೆ ಮಾನವ ಸಂಪನ್ಮೂಲ ಲಭ್ಯತೆಯ ಕೊರತೆಯೂ ಇದೆ ಎನ್ನುವುದನ್ನು ಅಲ್ಲಗಳೆಯಲಾಗದು. ನಮ್ಮಲ್ಲಿ ಇಂದು ಹಲವಾರು ಮಂದಿ ನಿರುದ್ಯೋಗಿ ವೈದ್ಯರು ಹಾಗೂ ದಾದಿಯರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ ಸರ್ಕಾರ ಏಕೆ ಇವರನ್ನು ನೇಮಕ ಮಾಡಿಕೊಳ್ಳಬಾರದು? ಈ ಪ್ರಶ್ನೆಯನ್ನು ಸಂಬಂಧಪಟ್ಟ ಯಾವ ಅಧಿಕಾರಿಗಳೂ ಮುಂದಿಡುತ್ತಿಲ್ಲ. ಜತೆಗೆ ಸಹಜವಾಗಿಯೇ ಇಂಥ ಪ್ರಶ್ನೆಗಳಿಗೆ ಉತ್ತರಗಳೂ ದೊರಕುವುದಿಲ್ಲ. ಇದೇ ಪರಿಸ್ಥಿತಿ ಶಿಕ್ಷಣ ವ್ಯವಸ್ಥೆಯಲ್ಲೂ ಇದೆ. ಶಿಕ್ಷಣ ಕ್ಷೇತ್ರಕ್ಕೆ ಉತ್ತಮ ಗುಣಮಟ್ಟದ ಶಿಕ್ಷಕರು ಬರುತ್ತಿಲ್ಲ ಎನ್ನುವುದು ದೊಡ್ಡ ಸಮಸ್ಯೆ. ಇದೇ ಪರಿಸ್ಥಿತಿ ಸಮಾಜದ ಆರ್ಥಿಕತೆಯ ವಿವಿಧ ಕ್ಷೇತ್ರಗಳಲ್ಲಿ ಬೃಹತ್ ಸಮಸ್ಯೆಯಾಗಿ ಬೆಳೆದಿವೆ.

ಜನಸಂಖ್ಯೆ ನಮ್ಮ ನಿಯಂತ್ರಣ ಮೀರುವ ಮೊದಲು ಇಂಥ ಸಮಸ್ಯೆಗಳಿಗೆ ನಾವು ಮೊದಲು ಪರಿಹಾರ ಕಂಡುಕೊಳ್ಳಬೇಕಿದೆ. ನಮ್ಮ ಜನಸಂಖ್ಯಾ ನೀತಿಯಲ್ಲಿ ನಿರುತ್ತೇಜಕ ಕ್ರಮಗಳನ್ನು ಅನುಸರಿಸಬಾರದು ಎಂದು ಹೇಳುವುದು ಸುಲಭ. ಆದರೆ ಇದಿಲ್ಲದಿದ್ದರೆ, ನಮ್ಮ ಜನಸಂಖ್ಯೆಯ ಅಪಾರ ಪ್ರಮಾಣವನ್ನು ನಾವೇ ನಿರ್ವಹಿಸುವುದು ಸಾಧ್ಯವಿಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಒಂದು ಕುಟುಂಬ ಎಷ್ಟು ಮಕ್ಕಳನ್ನು ಹೊಂದಿರಬೇಕು ಎಂದು ನಿರ್ಧರಿಸುವ ಹಕ್ಕು ಆ ಕುಟುಂಬದ್ದೇ ಆಗಿರಬೇಕು ಎನ್ನುವುದು ನಿಜ. ಆದರೆ ಉತ್ತಮ ಆರೋಗ್ಯ ಸೌಲಭ್ಯ ಮತ್ತು ಶಿಕ್ಷಣ ಎಲ್ಲಕ್ಕಿಂತ ಹೆಚ್ಚಾಗಿ ಈ ಬಗ್ಗೆ ಸಾಮಾಜಿಕ ಜಾಗೃತಿ ಇದೆಯೇ ಎನ್ನುವುದನ್ನು ಪರಿಶೀಲಿಸಬೇಕಾದ್ದು ಕೂಡಾ ಅಷ್ಟೇ ಅಗತ್ಯ. ಜನಸಂಖ್ಯಾ ಸ್ಫೋಟ ಒಂದು ಸ್ಥಿರತೆಯ ಹಂತಕ್ಕೆ ಬರಬೇಕಾದರೆ ಕಟ್ಟುನಿಟ್ಟಿನ ಕ್ರಮಗಳನ್ನು ಈಗಲಾದರೂ ಕೈಗೊಳ್ಳಬೇಕಾದ್ದು ಅನಿವಾರ್ಯ.

ಕುಟುಂಬದ ಗಾತ್ರವನ್ನು ಹಿಗ್ಗಿಸಿಕೊಳ್ಳದಂತೆ ಜನರಿಗೆ ಉತ್ತೇಜನ ನೀಡಬೇಕಾದ ಪ್ರಜಾಸತ್ತಾತ್ಮಕ ಸರ್ಕಾರವೇ, ಇಂಥ ಕ್ರಮಗಳಿಗೆ ಏಕೆ ಮೀನಮೇಷ ಎಣಿಸುತ್ತಿದೆ ಎನ್ನುವುದು ಅರ್ಥವಾಗುತ್ತಿಲ್ಲ. ಖಂಡಿತವಾಗಿಯೂ ನಿರತ್ತೇಜನ ಕ್ರಮದಿಂದ ಬಡವರನ್ನು ರಕ್ಷಿಸಬೇಕು. ಇಂಥ ಕುಟುಂಬಗಳು ದೈತ್ಯಗಾತ್ರವನ್ನು ಹೊಂದಿರಬೇಕು ಎನ್ನುವುದು ಏಕೆ ಎನ್ನುವುದು ಎಲ್ಲರಿಗೂ ತಿಳಿದ ಅಂಶವೇ ಆಗಿದೆ. ಆದರೆ ಅವರು ಒಂದು ನಿಗದಿತ ಗುರಿಯನ್ನು ಮುಟ್ಟಿದರೆ ಅದಕ್ಕೆ ಪ್ರೋತ್ಸಾಹಕಗಳನ್ನು ನೀಡಬೇಕಾದ್ದೂ ಸರ್ಕಾರದ ಆದ್ಯತೆಯಾಗಬೇಕು. ಇದರ ಜತೆಗೆ ಜನರನ್ನು ತಲುಪಲು ಮಾನವೀಯ ವಿಧಾನಗಳನ್ನು ಅನುಸರಿಸಬೇಕಾದ್ದು ಕೂಡಾ ಅನಿವಾರ್ಯ.

ದೊಡ್ಡ ಗಾತ್ರದ ಕುಟುಂಬಗಳಿಗೆ ನಿರುತ್ತೇಜಕಗಳನ್ನು ವಿಧಿಸಬೇಕು ಎಂದ ಮಾತ್ರಕ್ಕೆ ಎಲ್ಲ ಕುಟುಂಬಗಳಿಗೂ ಸಾರಾಸಗಟಾಗಿ ಅದನ್ನು ಅನ್ವಯಿಸಬೇಕು ಎಂಬ ಅರ್ಥವಲ್ಲ ಅಥವಾ ಅತ್ಯಂತ ಕಠಿಣವಾಗಿ ಅದನ್ನು ಜಾರಿಗೊಳಿಸಬೇಕು ಎಂಬ ಅರ್ಥವಲ್ಲ. ಭಾರತೀಯ ಸಾಮಾಜಿಕ ಪರಿಸ್ಥಿತಿಯಲ್ಲಿ, ಮಹಿಳೆ ಮಕ್ಕಳನ್ನು ಹೆರುತ್ತಾಳಾದರೂ, ಆಕೆಯ ಉತ್ಪಾದಕ ಹಕ್ಕಿನ ಮೇಲೆ ಆಕೆಗೆ ಮಿತವಾದ ನಿಯಂತ್ರಣವಿರುತ್ತದೆ ಅಥವಾ ನಿಯಂತ್ರಣವೇ ಇರುವುದಿಲ್ಲ. ಆ ಕುಟುಂಬಕ್ಕೆ ಎಷ್ಟು ಮಕ್ಕಳು ಬೇಕು ಎನ್ನುವುದನ್ನು ನಿರ್ಧರಿಸುವುದು ಆಕೆಯ ಗಂಡ ಅಥವಾ ಗಂಡನಮನೆಯವರು.

ಸಮಾಜದಲ್ಲಿ ಗಂಡುಮಗುವನ್ನು ಪಡೆಯಬೇಕು ಎಂಬ ಹಂಬಲ ಬಹುತೇಕ ಎಲ್ಲ ಕಡೆ ಕಂಡುಬರುತ್ತಿದೆ. ಯಾವುದೇ ಜಾತಿಭೇದ, ವರ್ಣಭೇದ ಅಥವಾ ವರ್ಗಭೇದವಿಲ್ಲದೇ ಈ ಮನೋಪ್ರವೃತ್ತಿ ಸಾರ್ವತ್ರಿಕವಾಗಿ ಕಂಡುಬರುತ್ತಿದೆ. ಈ ಹಿನ್ನೆಲೆ ಕೂಡಾ ಕುಟುಂಬದ ಗಾತ್ರ ಹೆಚ್ಚಲು ಕಾರಣವಾಗುತ್ತಿದೆ. ಸಣ್ಣ ಕುಟುಂಬದ ಪರಿಕಲ್ಪನೆ ಈ ಮನೋಭಾವವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಇಂಥ ಪರಿಸ್ಥಿತಿಯಲ್ಲಿ ಮಹಿಳೆ ಗಂಡುಮಗುವನ್ನೇ ಹೆರಬೇಕು ಎಂಬ ಬಗ್ಗೆ ಭಾರಿ ಪ್ರಮಾಣದ ಒತ್ತಡ ಆಕೆಯ ಮೇಲೆ ಇರುತ್ತದೆ. ಮೊದಲ ಮಗು ಹೆಣ್ಣಾಗಿದ್ದರೆ, ಎರಡನೇ ಮಗು ಗಂಡಾಗಿರಬೇಕು ಎಂಬ ನಿರೀಕ್ಷೆ ಮತ್ತು ಒತ್ತಡ ಮಹಿಳೆಯ ಮೇಲೆ ಅಧಿಕವಾಗಿರುತ್ತದೆ. ಪ್ರಸವಪೂರ್ವ ಲಿಂಗನಿರ್ಧಾರ ಕ್ರಮಗಳು ಕಾನೂನುಬಾಹಿರ. ಆದರೆ ಇಂದಿಗೂ ಹಲವು ಕ್ಲಿನಿಕ್‌ಗಳು ಈ ಕಾನೂನುಬಾಹಿರ ದಂಧೆಯಲ್ಲಿ ತೊಡಗಿಸಿಕೊಂಡಿವೆ. ಭಾರತದಲ್ಲಿ ಲಿಂಗಾನುಪಾತ ದಿನೇ ದಿನೇ ಕುಸಿಯುತ್ತಿದೆ.

ಕೆಲ ಪ್ರದೇಶಗಳಲ್ಲಂತೂ ಇದು ಅಪಾಯಕಾರಿ ಮಟ್ಟ ತಲುಪಿದೆ. ಮಹಿಳೆ ತನ್ನ ಭ್ರೂಣಹತ್ಯೆಗೆ ಮುಂದಾಗಲಾರಳು. ಆದರೆ ಸಾಮಾಜಿಕ ಒತ್ತಡ ಅವಳನ್ನು ಅಂಥ ಕೆಟ್ಟ ಕೆಲಸಗಳಿಗೆ ಪ್ರೇರೇಪಿಸುತ್ತದೆ. ಹೆಣ್ಣುಮಗುವನ್ನು ಸಾಮಾನ್ಯವಾಗಿ ಹೊರೆ ಎಂದೇ ಪರಿಗಣಿಸಲಾಗುತ್ತದೆ. ಆಕೆಯ ಮದುವೆಯನ್ನು ಗೌರವಯುತವಾಗಿ ಮಾಡುವ ಸಲುವಾಗಿ ಹಣ ಕೂಡಿಹಾಕುವುದು ಮರೀಚಿಕೆಯಾಗುತ್ತದೆ. ಇದರ ಜತೆಗೆ ಸಾಕಷ್ಟು ಪ್ರಮಾಣದಲ್ಲಿ ವರದಕ್ಷಿಣ ತರದೇ ಇರುವ ಕಾರಣಕ್ಕಾಗಿ ಆಕೆಯನ್ನು ಕೊಲ್ಲಲಾಗುತ್ತದೆ ಎಂಬ ಭೀತಿಯೂ ಇದಕ್ಕೆ ಕಾರಣವಿರಬಹುದು. ಆದ್ದರಿಂದ ಮೊದಲೇ ಮಗುವಿನ ಲಿಂಗ ನಿರ್ಧರಿಸಿ ಏಕೆ ಸುರಕ್ಷಿತವಾಗಿರಬಾರದು ಎಂಬ ಮನೋಭಾವ ಬಹುತೇಕ ಮಂದಿಯಲ್ಲಿ ಬೆಳೆಯುತ್ತದೆ. ಭೌತಿಕ ಅಭಿವೃದ್ಧಿ ಮತ್ತು ನಗರೀಕರಣವಷ್ಟೇ ಈ ಸಮಸ್ಯೆಗೆ ಪರಿಹಾರವಾಗಲಾರದು. ಈ ಮೂಲಕ ಸ್ವಲ್ಪವನ್ನಷ್ಟೇ ಸಾಧಿಸಲು ಸಾಧ್ಯ. ನಮ್ಮ ನಗರಗಳಲ್ಲಿ ಕೂಡಾ ಲಿಂಗಾನುಪಾತ ಆತಂಕಕಾರಿ ಪ್ರಮಾಣದಲ್ಲೇ ಇದೆ.

ಈ ನಿಟ್ಟಿನಲ್ಲಿ ನಮ್ಮ ಸ್ವಯಂಸೇವಾ ಸಂಸ್ಥೆಗಳು ಕೂಡಾ ಜನಪ್ರಿಯತೆಯ ಕಾರ್ಯಗಳಿಗೆ ಅಥವಾ ವಿಚಾರಸಂಕಿರಣಗಳನ್ನು ಬಿಟ್ಟು ನಿಜವಾಗಿ ಕಾರ್ಯಕ್ಷೇತ್ರಕ್ಕೆ ಇಳಿದರೆ ಉತ್ತಮ ಕಾರ್ಯಗಳನ್ನು ಮಾಡಲು ಅವಕಾಶವಿದೆ. ಜತೆಗೆ ಲಿಂಗ ತಾರತಮ್ಯವನ್ನು ನಿವಾರಿಸುವಲ್ಲಿ ಮಾಧ್ಯಮಗಳ ಪಾತ್ರ ಕೂಡಾ ಮಹತ್ವದ್ದು. ಅಂತಿಮವಾಗಿ ಮಹಿಳೆಯರನ್ನು ಸಬಲಗೊಳಿಸುವ ಮೂಲಕ ಅವರಲ್ಲಿ ಸಣ್ಣ ಕುಟುಂಬಗಳ ಮಹತ್ವವನ್ನು ಮನವರಿಕೆ ಮಾಡಬೇಕು. ಮಗು ಗಂಡಾಗಿರಲೀ, ಹೆಣ್ಣಾಗಿರಲೀ ಒಂದೇ ಮಗು ಸಾಕು ಎಂಬ ನಿರ್ಧಾರಕ್ಕೆ ಮಹಿಳೆ ಬರುವವರೆಗೂ ಈ ಸಮಸ್ಯೆಗೆ ಪರಿಹಾರ ಸಾಧ್ಯವಿಲ್ಲ.


www.shikarat.com

## 18. ರಾಜಕೀಯ ಅಪರಾಧೀಕರಣ

ದೇಶಕ್ಕೆ ಸ್ವಾತಂತ್ರ್ಯ ಗಳಿಸಿಕೊಟ್ಟ ನಾಯಕರು ತಮ್ಮ ಜೀವನದ ಧೀರ್ಘ ಅವಧಿಯನ್ನು ಜೈಲುಗಳಲ್ಲಿಕಳೆದಿದ್ದರು. ಬಹುಶಃ ಇಂದಿನ ರಾಜಕಾರಣಿಗಳು ಕೂಡಾ ತಮ್ಮ ಜೈಲುವಾಸವನ್ನು ಹೀಗೆ ಸಮರ್ಥಿಸಿಕೊಳ್ಳಬಹುದು. ಸ್ವಾತಂತ್ರ್ಯಪೂರ್ವದ ನಾಯಕರು ಕೆಟ್ಟ ಆಡಳಿತದ ವಿರುದ್ಧದ ಸ್ವಾತಂತ್ರ್ಯ ಹೋರಾಟದ ಕಾರಣಕ್ಕೆ ಜೈಲು ಸೇರಿದ್ದರು. ಆದರೆ ಇಂದಿನ ರಾಜಕಾರಣಿಗಳು ಜೈಲುಪಾಲಾಗುತ್ತಿರುವುದಕ್ಕೂ ಕಳ್ಳತನ, ಗ್ಯಾಂಗ್‌ವಾರ್, ಕೊಲೆ ಅಥವಾ ಅತ್ಯಾಚಾರಿಗಳು ಜೈಲುಪಾಲಾಗುತ್ತಿರುವುದುಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಇಂದಿನ ರಾಜಕಾರಣ ಎನ್ನುವುದು ವಂಚಕರ ಮೊದಲ ಆಯ್ಕೆ ಎನಿಸಿದೆ.

ದೇಶದಲ್ಲಿ ರಾಜಕೀಯದ ಅಪರಾಧೀಕರಣಕ್ಕೆ ಮೂಲ ಕಾರಣವೆಂದರೆ, ದೇಶದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರ ವ್ಯವಸ್ಥೆ. ಭಾರತದಲ್ಲಿ ಸರ್ಕಾರಕ್ಕೆ ದೊಡ್ಡಪ್ರಮಾಣದ ವಿವೇಚನಾಧಿಕಾರವಿದೆ. ಮತ್ತು ಅವರ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆಗೆ ಅವಕಾಶ ಕಡಿಮೆ. ಅಂಥ ಉನ್ನತ ಅಧಿಕಾರವನ್ನು ಪ್ರಶ್ನಾತೀತವಾಗಿ ನೀಡಿರುವ ಹಿನ್ನೆಲೆಯಲ್ಲಿ ಅದರ ದುರ್ಬಳಕೆ ಸಾಧ್ಯತೆಗಳೂ ಅಧಿಕ.

ಇತ್ತೀಚಿನವರೆಗೂ ಮತ್ತು ಸ್ವಲ್ಪಮಟ್ಟಿಗೆ ಈಗ ಕೂಡಾ ದೇಶದ ಆರ್ಥಿಕತೆಯ ನಿಯಂತ್ರಣದ ಜವಾಬ್ದಾರಿ ಸರ್ಕಾರದ್ದು. ದೇಶದಲ್ಲಿ ಯಾರೇ ಪ್ರಜೆಗಳು ಹೊಸ ವ್ಯಾಪಾರ ಆರಂಭಿಸುವುದಾದರೆ, ಒಂದು ಕೈಗಾರಿಕೆ ಆರಂಭಿಸಬೇಕಾದರೆ ಅಥವಾ ಲಾಭದಾಯಕ ಸ್ವ ಉದ್ಯೋಗ ಕೈಗೊಳ್ಳಬೇಕಾದರೆ ಸರ್ಕಾರದ ಕೃಪಾಕಟಾಕ್ಷ ಪಡೆಯಲೇಬೇಕು. ಅದು ಲೈಸನ್ಸ್ ಮತ್ತು ಪರ್ಮಿಟ್ ರೂಪದಲ್ಲಿರಬಹುದು ಅಥವಾ ಅಧಿಕಾರಿಗಳ ಕಿರುಕುಳದಿಂದ ರಕ್ಷಣೆ ಪಡೆಯುವ ವಿಚಾರದಲ್ಲಿರಬಹುದು. ಇಂಥ ಪರಿಸ್ಥಿತಿಯಲ್ಲಿ ರಾಜಕಾರಣಿಗಳು ಸರ್ಕಾರದ ಕೃಪಾಕಟಾಕ್ಷ ಹರಿಸುವ ಮಧ್ಯವರ್ತಿಗಳಾಗಿ ಮತ್ತು ಇದನ್ನು ಲಾಭದಾಯಕ ಉದ್ಯಮವಾಗಿ ಪರಿಗಣಿಸಿದರು. ಖಂಡಿತವಾಗಿಯೂ ರಾಜಕಾರಣಿಗಳಿಗೆ ಜನತೆಯ ಅಗತ್ಯತೆಗಳು ಮತ್ತು ಹಿತಾಸಕ್ತಿಗಳು ಇಂದು ಪ್ರಮುಖವಾಗಿಲ್ಲ.

ಸರ್ಕಾರದ ಕೃಪಾಕಟಾಕ್ಷದ ದಲ್ಲಾಳಿಗಳಾಗಿರುವುದರಿಂದ ಸಹಜವಾಗಿಯೇ ರಾಜಕಾರಣಿಗಳ ಸುತ್ತ ಫೇವರೇಟ್ ಎಂಬ ಭಾವನೆ ಬೆಳೆಯಿತು. ಲೈಸನ್ಸ್ ಅಥವಾ ಪರ್ಮಿಟ್‌ಗಳನ್ನು ಅನರ್ಹರಿಗೂ ನೀಡಲಾಯಿತು. ಈ ಕಾರಣದಿಂದಾಗಿ ಕಾನೂನುಬಾಹಿರ ಚಟುವಟಿಕೆಗಳು ಹುಲುಸಾಗಿ ಬೆಳೆಯಿತು. ಇದಕ್ಕೆ ಪೊಲೀಸ್ ವ್ಯವಸ್ಥೆ ಕೂಡಾ ಪರೋಕ್ಷವಾಗಿ ಕೈಜೋಡಿಸಿತು. ಎರಡೂ ವಿಧಗಳಲ್ಲಿ ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವ ಮನೋಭಾವ ಬೆಳೆಯಿತು.

ಒಂದು ಸಲ ರಾಜಕೀಯ ವ್ಯವಸ್ಥೆಯನ್ನು ಇಂಥ ಭ್ರಷ್ಟಾಚಾರ ಹಾಳುಗೆಡವಿದ ತಕ್ಷಣ, ಇದು ಅಪರಾಧಿಗಳ ಪ್ರವೇಶಕ್ಕೆ ಹಾದಿಯನ್ನು ಸುಗಮಗೊಳಿಸಿತು. ಮತಗಳನ್ನು ಖರೀದಿಸಲು, ನಿರ್ದಿಷ್ಟ ಪಕ್ಷ ಮತ್ತು ಅಭ್ಯರ್ಥಿಯ ಪರವಾಗಿ ಮತ ಚಲಾಯಿಸುವಂತೆ ಜನತೆಯ ಮೇಲೆ ಒತ್ತಡ ತರಲು, ಕೆಲ ಅಭ್ಯರ್ಥಿಗಳ ಜಯವನ್ನು ಖಚಿತಪಡಿಸಲು, ವಿರೋಧಪಕ್ಷಗಳಲ್ಲಿ ಭೀತಿ ಹುಟ್ಟಿಸಲು, ರಾಜಕಾರಣಿಗಳು ಗ್ಯಾಂಗ್‌ಸ್ಟರ್‌ಗಳನ್ನು ಮತ್ತು ಗೂಂಡಾಗಳನ್ನು ನಿಯೋಜಿಸಿಕೊಂಡರು. ಇವರು ಕ್ರಮೇಣ ಕಾನೂನುಬದ್ಧವಾಗಿ, ಪ್ರಜಾಸತ್ತಾತ್ಮಕ ರೀತಿಯಲ್ಲಿ ಶಾಸನಸಭೆಗಳನ್ನೂ ಪ್ರವೇಶಿಸಿದರು. ಹಾಗೂ ಈ ದೇಶದ ಕಾನೂನು ರೂಪಿಸುವವರಾಗಿ ಬದಲಾದರು. ಎಂಥ ವಿಪರ್ಯಾಸ!

ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ಜನರು ಸಕ್ರಿಯವಾಗಿ ಪಾಲ್ಗೊಳ್ಳುವುದರಿಂದ ಮಾತ್ರ ರಾಜಕಾರಣಿಗಳು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವುದನ್ನು ಮತ್ತು ರಾಜಕೀಯದ ಅಪರಾಧೀಕರಣವನ್ನು ತಡೆಯಲು ಸಾಧ್ಯ. ಅಧಿಕಾರ ವಿಕೇಂದ್ರೀಕರಣಗೊಳ್ಳಬೇಕು; ನೀತಿ ನಿಯಮಗಳು ಮತ್ತು ಕಾನೂನುಗಳು ಪಾರದರ್ಶಕವಾಗಿರಬೇಕು; ಸರ್ಕಾರವನ್ನು ನಡೆಸುವಲ್ಲಿ ಸಾರ್ವಜನಿಕರ ಪಾಲ್ಗೊಳ್ಳುವಿಕೆ ಸಕ್ರಿಯವಾಗಿ ಬದಲಾಗಬೇಕು, ಈ ನಿಟ್ಟಿನಲ್ಲಿ ನಾಗರಿಕ ಸಮಿತಿಗಳು ಕಾರ್ಯೋನ್ಮುಖವಾಗಬೇಕು. ಸಹಕಾರಿಗಳು ಈ ನಿಟ್ಟಿನಲ್ಲಿ ಕೈಜೋಡಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಸರ್ಕಾರ ಎಲ್ಲ ಆರ್ಥಿಕ ಚಟುವಟಿಕೆಗಳಲ್ಲಿ ಹಸ್ತಕ್ಷೇಪ ಮಾಡಬಾರದು.

## 19. ಮರಣದಂಡನೆಯಿಂದ ಏನೂ ಪರಿಹಾರವಾಗದು

ಯಾವುದೇ ಬಗೆಯಲ್ಲಾದರೂ ಸಾವು ನಮಗೆ ಸ್ವೀಕಾರಾರ್ಹ ಎನಿಸುವುದಿಲ್ಲ. ಸಾವು ಎನ್ನುವುದು ಬದುಕಿಗೆ ವಿರುದ್ಧವಾದದ್ದು. ಇದರ ಕಲ್ಪನೆಯೇ ಬದುಕನ್ನು ದುರ್ಬಲಗೊಳಿಸುತ್ತದೆ, ಅಸ್ಥಿರಗೊಳಿಸುತ್ತದೆ ಮತ್ತು ಸಮರ್ಥನೀಯವಲ್ಲ ಎನಿಸುತ್ತದೆ. ಒಬ್ಬನಿಗೆ ಮರಣದಂಡನೆ ವಿಧಿಸುವ ತೀರ್ಪು ನೀಡುವ ನ್ಯಾಯಾಧೀಶ ಸಮಾಜಕ್ಕೆ ಒಳಿತು ಮಾಡಿದ್ದೇನೆ ಎಂದುಕೊಳ್ಳಬಹುದು. ಆದರೆ ಅದಕ್ಕೆ ಆತನ ಅಂತರ್ಯ ನಿಜವಾಗಿಯೂ ಒಪ್ಪಿಗೆ ನೀಡಿರುವುದಿಲ್ಲ. ಆತನ ಮನೆಯವರಿಗೂ ಇಷ್ಟದ ನಿರ್ಧಾರವಾಗಿರುವುದಿಲ್ಲ. ಜತೆಗೆ ಒಂದು ವ್ಯವಸ್ಥೆಯ ಹೊರಗೆ ನಿಂತು ನೋಡುವ ಯಾರಿಗೂ ಅದು ಇಷ್ಟದ ತೀರ್ಪು ಆಗಿರುವುದಿಲ್ಲ. ಮರಣದಂಡನೆಗೆ ಒಳಗಾಗುವ ಯಾವುದೇ ಅಪರಾಧಿಗೆ, ಬದಲಾಗುವ ಅವಕಾಶವನ್ನು ನಾವು ನಿರಾಕರಿಸಿದಂತಾಗುತ್ತದೆ. ಕಾನೂನುಬದ್ಧವಾಗಿ ದಂಡನೆಗೆ ಒಳಗಾದ ವ್ಯಕ್ತಿಯೊಬ್ಬ ವಿಶ್ವದ ಬಗ್ಗೆ ತನ್ನ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳುವ ಅವಕಾಶ ಖಂಡಿತವಾಗಿಯೂ ಇರುತ್ತದೆ. ಕಾನೂನು ಅದಕ್ಕೆ ನಿಗದಿಪಡಿಸಿದ ನಿಯಮಿತ ಚೌಕಟ್ಟಿನಲ್ಲೇ ಇರುವುದು ಹೆಚ್ಚು ಸೂಕ್ತ. ಒಬ್ಬನಿಗೆ ಮರಣದಂಡನೆ ಶಿಕ್ಷೆ ನೀಡುವ ಮೂಲಕ ಅದು ಆತನ ಭವಿಷ್ಯವನ್ನೇ ಸಂಪೂರ್ಣವಾಗಿ ನಾಶ ಮಾಡಿದಂತಾಗುತ್ತದೆ.

ಮರಣದಂಡನೆ ಶಿಕ್ಷೆಯನ್ನು ಸಮರ್ಥಿಸಿಕೊಳ್ಳುವವರು ಸಾಮಾನ್ಯವಾಗಿ ಅಪರಾಧ ಕಥೆಗಳನ್ನು ಹೆಚ್ಚಾಗಿ ಓದುವವರಾಗಿರುತ್ತಾರೆ ಮತ್ತು ಇಷ್ಟಪಡುವವರಾಗಿರುತ್ತಾರೆ. ನಾವು ನಮ್ಮ ಇಂದ್ರಿಯಗಳಿಗೆ ಹೆಚ್ಚು ಹೆಚ್ಚು ಮನೋರಂಜನೆ ಬಯಸುತ್ತೇವೆ. ಏಕೆಂದರೆ ಇದು ಸುಲಭದ ಜೀವನ ವಿಧಾನ. ನಮ್ಮ ಬೌದ್ಧಿಕತೆಗೆ ಆಹಾರ ನೀಡದೇ ಸುಲಭವಾಗಿ ನಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳಲು ಸುಲಭಸಾಧ್ಯವಾಗುತ್ತದೆ. ನಮ್ಮ ಬದುಕು ಹೆಚ್ಚುಹೆಚ್ಚು ಯಾಂತ್ರಿಕವಾದಂತೆ, ಇಂಥ ಕ್ರೌರ್ಯದಿಂದ ಆನಂದ ಪಡುವ ನಮ್ಮ ಪ್ರವೃತ್ತಿಯೂ ಬೆಳೆಯುತ್ತಾ ಹೋಗುತ್ತದೆ. ಚಲನಚಿತ್ರಗಳು ಸಾಮಾನ್ಯವಾಗಿ ಅಪರಾಧ, ಹಿಂಸೆ, ಲೈಂಗಿಕ ಅಂಶಗಳನ್ನು ವೈಭವೀಕರಿಸುತ್ತವೆ. ಆದರೆ ನಮ್ಮ ಬಗ್ಗೆ ಕಾಳಜಿ ವಹಿಸುವಂಥ ಚಿತ್ರಗಳು ವಿರಳ. ಆದ್ದರಿಂದ ಒಬ್ಬ ವಾಸ್ತವ ಜಗತ್ತಿನಲ್ಲಿ ಸಾವಿನ ದವಡೆಗೆ ಹೋಗುತ್ತಿದ್ದಾನೆ ಎಂದರೆ ನಮಗೆ ಮನೋರಂಜನೆಯ ವಸ್ತುವಾಗುತ್ತದೆ!

ಅಪರಾಧಿಗಳ ಕೃತ್ಯ ಮತ್ತೆ ಸಮಾಜವನ್ನು ಬಾಧಿಸಬಾರದು ಮತ್ತು ಇಂಥ ಮನೋಭಾವ ಇರುವವರಿಗೆ ಇದು ನೀತಿಪಾಠವಾಗಬೇಕು ಎನ್ನುವುದು ಮರಣದಂಡನೆ ಶಿಕ್ಷೆಯ ಹಿಂದಿನ ಉದ್ದೇಶ. ಇದು ಮಾನವನ ಸಹಜ ಸ್ವಭಾವಕ್ಕೆ ತೀರಾ ವಿರುದ್ಧವಾದ ಅಭಿಪ್ರಾಯ.


www.shikarat.com

ಮೊದಲನೆಯದಾಗಿ ಇಡೀ ಮನುಕುಲವೇ ಅಪರಾಧ ಮಾಡಲು ಮುಂದಾಗಿ ನಿಂತಿದೆ ಎಂಬ ಮನೋಭಾವವನ್ನು ಇದು ಹೊಂದಿದೆ. ಸಾವು ಸೇರಿದಂತೆ ಏನು ಮಾಡಲೂ ಸಾರ್ವಜನಿಕರು ಹಿಂಜರಿಯುವುದಿಲ್ಲ ಎನ್ನುವುದು ಇದರ ಭ್ರಮೆ. ಮಾನವೀಯತೆಯ ನೆಲೆಯಲ್ಲಿ ನಡೆದ ಎಲ್ಲ ಪ್ರಯತ್ನಗಳನ್ನೂ ಇದು ನಿರ್ಲಕ್ಷಿಸುತ್ತದೆ. ಎರಡನೆಯದಾಗಿ ಮರಣ ದಂಡನೆ ಎನ್ನುವುದು ನ್ಯಾಯದ ರೂಪದಲ್ಲಿ ಪ್ರತೀಕಾರ ತೆಗೆದುಕೊಳ್ಳುವ ಗುಣ. ಎಲ್ಲಕ್ಕಿಂತ ಹೆಚ್ಚಾಗಿ ಮರಣದಂಡನೆ ಎಂದರೇನು? ಕಣ್ಣಿಗೆ ಕಣ್ಣು, ಜೀವಕ್ಕೆ ಜೀವ ತೆಗೆಯುವುದೇ? ಇದು ನಾಗರಿಕ ಸಮಾಜದ ಮೌಲ್ಯಗಳಿಗೆ ಅನುಗುಣವಾದದ್ದೇ? ಕ್ಷಮಾಭಾವ ಮತ್ತು ಮೌಲ್ಯಯುತ ಅಂಶಗಳ ಬಗ್ಗೆ ನಾವು ಬೆನ್ನುಹಾಕಬೇಕೇ?

ಯಾವುದೇ ಅಪರಾಧ ಕೃತ್ಯಗಳು ಘಟಿಸಬೇಕಾದರೆ, ಅದರ ಹಿಂದೆ ಸಾಮಾಜಿಕ ಮತ್ತು ಆರ್ಥಿಕ ಕಾರಣಗಳು ಇರುತ್ತವೆ. ಪ್ರಿಯತಮೆಯನ್ನು ಕಳೆದುಕೊಂಡ ಪ್ರಿಯಕರ ಹತಾಶನಾಗಬಹುದು; ಆದರೆ ಇದು ತೀರಾ ಖಾಸಗಿ ಘಟನೆಯಲ್ಲವೇ? ಆತನ ಹತಾಶೆಗೆ ಕಾರಣವಾಗಲು ಇತರ ಅಂಶಗಳು ಕಾರಣವಾಗಿರುವ ಸಾಧ್ಯತೆಗಳೂ ಇರುತ್ತವೆ. ಮನಃಶಾಸ್ತ್ರಜ್ಞರಿಗಿಂತಲೂ ಹೆಚ್ಚಾಗಿ ಸಮಾಜ ಶಾಸ್ತ್ರಜ್ಞರು, ಈ ನಿಟ್ಟಿನಲ್ಲಿ ಹೆಚ್ಚಿನ ಸಂಶೋಧನೆ ನಡೆಸಿ, ಬ್ಲಾಕ್‌ಮೇಲ್, ಕೊಲೆಯಂಥ ಕೃತ್ಯಗಳ ಹಿಂದಿನ ನೈಜ ಕಾರಣಗಳನ್ನು ಪತ್ತೆ ಮಾಡುವುದು ಅಗತ್ಯ.

ಭಾರತೀಯ ಸಮಾಜ ವರ್ಗಾವಣೆಯ ಹೊಸ್ತಿಲಲ್ಲಿದೆ. ಈ ಹಿನ್ನೆಲೆಯಲ್ಲಿ ಇಂಥ ಹಿಂಸಾಕೃತ್ಯದ ಬಗ್ಗೆ ಒಂದು ನಿರ್ದಿಷ್ಟ ಹಾಗೂ ಮಾನವೀಯ ನಿರ್ಧಾರಗಳನ್ನು ಕೈಗೊಳ್ಳುವುದು ಅಗತ್ಯ. ಮರಣದಂಡನೆ ಎಂದರೆ ಖಂಡಿತವಾಗಿಯೂ ತೀರಾ ಕ್ರೂರ ಹಾಗೂ ಅಮಾನುಷ ಕ್ರಮ. ಇದು ಸಮಾಜದ ಸಮಸ್ಯೆಗಳ ನಿವಾರಣೆಗೆ ಕೇವಲ ಸಿನಿಮೀಯ ಪರಿಹಾರವಷ್ಟೇ ಆದೀತು.

**ಇತ್ತೀಚಿನ ವಿದ್ಯಾಮಾನ**

ಮರಣದಂಡನೆ ಯನ್ನು ತಾತ್ಕಾಲಿಕವಾಗಿ ನಿಷೇಧಿಸುವ ವಿಶ್ವಸಂಸ್ಥೆಯ ನಿರ್ಣಯವನ್ನು ಭಾರತ ವಿರೋಧಿಸಿದ್ದು, ಈ ನಿರ್ಣಯವು ಸಂವಿಧಾನ ಮತ್ತು ದೇಶದ ಕಾನೂನು ವ್ಯವಸ್ಥೆಗೆ ವಿರುದ್ಧವಾಗಿದೆ ಎಂದು ಹೇಳಿದೆ.

ಭಾರತದ ವಿರೋಧದ ಹೊರತಾ ಗಿಯೂ ಈ ನಿರ್ಣಯ ವಿಶ್ವಸಂಸ್ಥೆಯಲ್ಲಿ ಅಂಗೀಕಾರಗೊಂಡಿದೆ. ನಿರ್ಣಯದ ಪರವಾಗಿ 115 ರಾಷ್ಟ್ರಗಳು ಮತ್ತು ವಿರುದ್ಧವಾಗಿ 38 ರಾಷ್ಟ್ರಗಳು ಮತ ಚಲಾಯಿಸಿವೆ. 31 ದೇಶಗಳು ತಟಸ್ಥ ನಿಲುವನ್ನು ತಾಳಿವೆ

'ಭಾರತದಲ್ಲಿ ಸಮಾಜದ ಆತ್ಮಸಾಕ್ಷಿಗೆ ಧಕ್ಕೆ ತರುವ ಘೋರ ಅಪರಾಧಗಳನ್ನು 'ಅತಿ ವಿರಳ' ಪ್ರಕರಣಗಳೆಂದು ಪರಿಗಣಿಸಲಾಗುತ್ತದೆ. ಅಂತಹ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಮರಣದಂಡನೆ ವಿಧಿಸಲಾಗುತ್ತದೆ' ಎಂದು ವಿಶ್ವಸಂಸ್ಥೆಯಲ್ಲಿ ಭಾರತದ ಪ್ರತಿನಿಧಿಯಾಗಿರುವ ಮಯಾಂಕ್ ಜೋಷಿ ದೇಶದ ನಿಲುವನ್ನು ವಿವರಿಸಿದ್ದಾರೆ.

## 20. ನನ್ನ ಕನಸಿನ ಭಾರತ

"ನೀವು ಭಾರತೀಯರು ಎನ್ನುವುದಕ್ಕೆ ಹೆಮ್ಮೆಪಡಿ;
ನಾನು ಭಾರತೀಯ ಎಂದು ಹೆಮ್ಮೆಯಿಂದ ಹೇಳಿಕೊಳ್ಳಿ"

ಇದು ಸ್ವಾಮಿ ವಿವೇಕಾನಂದರ ವಾಣಿ. ಆದರೆ ಇಂದಿನ ಭಾರತದ ನಾಗರಿಕರು ಹಾಗೆ ಹೇಳಿಕೊಳ್ಳಬಹುದೇ? ನಮ್ಮ ಸುಂದರ ದೇಶಕ್ಕೆ ಏನಾಗಿದೆ? ಶ್ರೀಮಂತ ಪರಂಪರೆ ಹೊಂದಿದ, ನಮ್ಮ ಹಿರಿಯರು ನಮಗೆ ಹಸ್ತಾಂತರಿದ ವೈಭವದ ಸಾಂಸ್ಕೃತಿಕ ಪರಂಪರೆ ಇಂದು ಏನಾಗಿದೆ? ಇಂಥ ಭಾರತಕ್ಕಾಗಿ ನಮ್ಮ ಸ್ವಾತಂತ್ರ್ಯ ಹೋರಾಟಗಾರರು ಹೋರಾಡಿದರೇ? ಇದು ನಮ್ಮ ಕನಸಿನ ಭಾರತವೇ?

ಹೌದು. ಆದರೆ ನನ್ನ ಕನಸಿನ ಭಾರತ ಸಂಪೂರ್ಣ ಭಿನ್ನ, ಭಾರತ ಒಬ್ಬ ಸಮರ್ಥ ನಾಯಕನ ದಕ್ಷ ಆಡಳಿತದಿಂದ ಸಮಸ್ತ ಜನತೆಯ ಕಲ್ಯಾಣವಾಗುವುದನ್ನು ನಾನು ಕನಸು ಕಾಣುತ್ತಿದ್ದೇನೆ. ಜನರ ಅಗತ್ಯತೆಗಳನ್ನು ಪೂರೈಸಲು ಆದ್ಯತೆ ನೀಡುವ ನಾಯಕ ನಮಗೆ ಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಪ್ರತಿ ವಿಷಯದಲ್ಲೂ ಶಿಕ್ಷಣ ಪಡೆದ ನಾಯಕ ಬೇಕು. ಒಬ್ಬ ಭ್ರಷ್ಟಾಚಾರ ಮುಕ್ತ ನಾಯಕ, ನಾಯಕತ್ವದಲ್ಲಿ ಮೌಲ್ಯವಿರುವ, ಎಲ್ಲ ಭಾರತೀಯರು ಹೆಮ್ಮೆಯಿಂದ ನಾನು ಭಾರತೀಯ ಎಂದು ಹೇಳಿಕೊಳ್ಳುವಂಥ ದೇಶವನ್ನು ಕಟ್ಟುವ ಸಾಮರ್ಥ್ಯ ಹೊಂದಿರಬೇಕು.

"ವಿವಿಧತೆಯಲ್ಲಿ ಏಕತೆ" ಎಂದು ನಾವು ನಮ್ಮ ದೇಶವನ್ನು ಬಣ್ಣಿಸುತ್ತೇವೆ. ಖಂಡಿತವಾಗಿಯೂ ಇದು ನಿಜ. ನಾವು ನಮ್ಮ ಎಲ್ಲರ ಸಾಮರ್ಥ್ಯಗಳನ್ನು ಸಂಘಟಿತಗೊಳಿಸಬೇಕು. ನಾವು ಎಲ್ಲ ಭೌಗೋಳಿಕ, ಭಾಷೀಯ, ಸಾಂಸ್ಕೃತಿಕ ಮತ್ತು ರಾಜ್ಯಗಳ ಅಡೆತಡೆಗಳನ್ನು ಮೀರಿ ಒಗ್ಗಟ್ಟಾಗಿ ನಿಂತು ದೇಶದ ಸಮಗ್ರ ಕಲ್ಯಾಣಕ್ಕೆ ಮತ್ತು ದೇಶದ ಉನ್ನತಿಗೆ ಶ್ರಮಿಸಬೇಕು. ಶೇಕಡ 100ರಷ್ಟು ಸಾಕ್ಷರ ಜನರನ್ನು ಹೊಂದಿರುವ ಭಾರತ ನನ್ನ ಕನಸು. ಇದನ್ನು ಸಾಧಿಸಬೇಕಾದರೆ ನಾವೆಲ್ಲರೂ ಜಾಗೃತರಾಗಬೇಕು. ಪ್ರತಿಯೊಬ್ಬರೂ ಶೈಕ್ಷಣಿಕವಾಗಿ ಪ್ರಗತಿ ಸಾಧಿಸಲು ಮತ್ತು ಸಮರ್ಪಕ ಅರ್ಹತೆ ಗಳಿಸಿಕೊಳ್ಳಲು ಶಕ್ತಿಮೀರಿ ಶ್ರಮಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ನಮ್ಮ ಮತದಾನದ ಹಕ್ಕನ್ನು ವಿವೇಚನಾಶೀಲವಾಗಿ ಬಳಸಬೇಕು.

ಆಡುವ ವಯಸ್ಸಿನ ಮಕ್ಕಳು ಆಟವಾಡುತ್ತಾ ನಲಿದಾಡುತ್ತಾ, ನಗುತ್ತಾ ಅವರ ಪಾಡಿಗೆ ಕಲಿಯುವ ಭಾರತವನ್ನು ಕಲ್ಪಿಸಿಕೊಳ್ಳಿ, ಇಂಥ ಮಕ್ಕಳು ಮುಂಜಾನೆಯಿಂದ ಮುಸ್ಸಂಜೆ ವರೆಗೆ ಬಾಲಕಾರ್ಮಿಕರಾಗಿ ದುಡಿಯುವ ಪರಿಸ್ಥಿತಿಯನ್ನು ನಾವು ಕನಸಿನಲ್ಲೂ ಕಲ್ಪಿಸಿಕೊಳ್ಳಬಾರದು. ಅವರು ಬಾಲ್ಯವನ್ನು ಕಸಿದುಕೊಳ್ಳುವ ಹಕ್ಕು ನಮಗಾರಿಗೂ ಇಲ್ಲ ಎನ್ನುವ ಪ್ರಜ್ಞೆ ನಮಗೆಲ್ಲರಿಗೂ ಮೂಡಬೇಕು. ಮಕ್ಕಳಿಗೆ ಸಂಪೂರ್ಣ ಹಾಗೂ ಕಡ್ಡಾಯ ಶಿಕ್ಷಣ ನೀಡಿದಾಗ ಮತ್ತು ಯುವಕರಲ್ಲಿ ಜಾಗೃತಿ ಮೂಡಿಸಿದಾಗ ಮಾತ್ರ ಇದನ್ನು ಸಾಧಿಸಲು ಸಾಧ್ಯ.


www.shikarat.com

ನಮ್ಮ ಬಹುಸಂಖ್ಯಾತ ದಲಿತರು ಶಿಕ್ಷಣ ಪಡೆಯುವುದು ಯಾವಾಗ? ಅವರು ತಮ್ಮ ಹಸ್ತಾಕ್ಷರವನ್ನು ಭಾರತೀಯ ಇತಿಹಾಸದಲ್ಲಿ ಮೂಡಿಸುವುದು ಯಾವಾಗ?

ನನ್ನ ಕನಸಿನ ಭಾರತ ಖಂಡಿತವಾಗಿಯೂ ಸಣ್ಣ ಕುಟುಂಬಗಳ ಮಹತ್ವನ್ನು ಅರ್ಥ ಮಾಡಿಕೊಳ್ಳುತ್ತದೆ. ದೇಶದಲ್ಲಿ ಜನಸಂಖ್ಯಾ ಸ್ಫೋಟದ ದುಷ್ಪರಿಣಾಮದ ಬಗ್ಗೆ ನನ್ನ ಜನ ಚಿಂತಿಸದಿದ್ದರೆ, ಕಾಲ ಮಿಂಚಿಹೋದೀತು. ನೂರು ಕೋಟಿ ಜನಸಂಖ್ಯೆಯನ್ನು ಮೀರಿದ ನಾವು 2000ನೇ ಇಸ್ವಿಯಲ್ಲೇ ಬಿಲಿಯನ್ ಕ್ಲಬ್ ಸೇರಿದ್ದೇವೆ. ಜನ ಕೇವಲ ಸಾಕ್ಷರತೆ ಸಾಧಿಸಿದರಷ್ಟೇ ಸಾಲದು. ಕುಟುಂಬ ಯೋಜನೆಯ ಬಗ್ಗೆ ಅರಿವು ಹೊಂದಬೇಕು. ಆಂಧ್ರ ಪ್ರದೇಶದಂಥ ಕೆಲ ರಾಜ್ಯಗಳು ಮಾತ್ರ ಈ ನಿಟ್ಟಿನಲ್ಲಿ ಯಶಸ್ಸು ಸಾಧಿಸಿವೆ. ನನ್ನ ಕನಸಿನ ಭಾರತ ಪ್ರಸ್ತುತ ಇರುವ ಆರ್ಥಿಕತೆಯನ್ನು ವಿಸ್ತರಿಸಿಕೊಳ್ಳಬೇಕು. ಎಲ್ಲ ಜನರಿಗೂ ಸೂಕ್ತವಾದ ಕಾಂಕ್ರಿಟ್ ಚಾವಣಿಯ ಸೂರು ಕಲ್ಪಿಸಬೇಕು. ಮಳೆಯಿರಲಿ, ಬಿಸಿಲಿರಲಿ, ಅವರಿಗೆ ಸೂಕ್ತವಾಗಿ ಪೌಷ್ಟಿಕ ಆಹಾರ ಸಿಗುವಂತೆ ಮಾಡಿಕೊಳ್ಳುವ ಜತೆಗೆ ಅವರಿಗೆ ಲಾಭದಾಯಕ ಉದ್ಯೋಗಾವಕಾಶ ಲಭಿಸುವಂತೆ ನೋಡಿಕೊಳ್ಳಬೇಕು. ಅವರ ಅರ್ಹತೆಗೆ ತಕ್ಕ ಉದ್ಯೋಗ ಎಲ್ಲರಿಗೂ ಲಭಿಸಬೇಕು.

ನನ್ನ ಕನಸಿನ ಭಾರತದಲ್ಲಿ ಉತ್ತಮ ಹಾಗೂ ಸ್ಥಿರ ಸರ್ಕಾರ ಇರಬೇಕು. ಇದು ಕೇವಲ ಜನರು ನಡೆಸುವ ಸರ್ಕಾರವಾಗಿರದೇ ನಿಜ ಅರ್ಥದಲ್ಲಿ ಜನರಿಗಾಗಿ ಇರುವ ಸರ್ಕಾರವಾಗಿ ರೂಪುಗೊಳ್ಳಬೇಕು. ಜಾಗತೀಕರಣದ ಜತೆ ಆಂತರಿಕ ಸಮತೋಲನ ಸಾಧಿಸಬೇಕು. ಕೈಗಾರಿಕೀಕರಣ ಅಗತ್ಯ. ಆದರೆ ನಮ್ಮ ಕೃಷಿ ಕ್ಷೇತ್ರದ ಹಿತಾಸಕ್ತಿಯನ್ನು ಬಲಿಕೊಟ್ಟು, ಕೈಗಾರಿಕೆ ಬೆಳೆಯುವಂತಾಗಬಾರದು. ಇದು ನಾವು ಆರಾಮವಾಗಿ ಕೂರುವ ಸಮಯವಲ್ಲ. ನೆಹರೂ ಅವರ ಹೇಳಿಕೆಯಂತೆ, "ಪ್ರತಿಯೊಂದೂ ನಮ್ಮನ್ನು ಕಾಯಬಹುದು; ಆದರೆ ಕೃಷಿ ನಮ್ಮನ್ನು ಕಾಯುವುದಿಲ್ಲ" ಎನ್ನುವುದು ಇಂದಿಗೂ ಪ್ರಸ್ತುತ.

ಆರಂಭಿಕ ಹಂತದಲ್ಲಿ ಕೈಗಾರಿಕೆಗಳಿಗೆ ಒತ್ತು ನೀಡುವ ಭರದಲ್ಲಿ ನಾವು ಕೃಷಿಕ್ಷೇತ್ರವನ್ನು ನಿರ್ಲಕ್ಷಿಸಿದ್ದೆವು. ಆದರೆ 1970ರ ದಶಕದ ಹಸಿರುಕ್ರಾಂತಿಯೊಂದಿಗೆ ಇದು ಮತ್ತೆ ಮಹತ್ವ ಪಡೆಯಿತು. ಡಾ.ಎಂ.ಎಸ್.ಸ್ವಾಮಿನಾಥನ್ ಅವರ ಪ್ರಯತ್ನದಿಂದಾಗಿ ಈ ಸಾಧನೆ ಸಾಧ್ಯವಾಯಿತು. ಆದರೆ ಮುಂದಿನ ದಶಕಗಳಲ್ಲಿ ಮತ್ತೆ ಕೃಷಿ ಹಿಂದಕ್ಕೆ ಸರಿಯಿತು. ಅದಾಗ್ಯೂ ಜೈವಿಕ ತಂತ್ರಜ್ಞಾನ ಕ್ಷೇತ್ರದ ಇತ್ತೀಚಿನ ಸಂಶೋಧನೆಗಳಿಂದಾಗಿ, ಕೃಷಿ ಕ್ಷೇತ್ರಕ್ಕೆ ಮತ್ತೆ ಅವಕಾಶ ಮತ್ತು ನಿರೀಕ್ಷೆ ಮೂಡಿದೆ.

ಕೃಷಿಯಾಧರಿತ ಕೈಗಾರಿಕೆಗಳ ಬೆಳವಣಿಗೆಗೆ ನಾವು ಒತ್ತು ನೀಡಬೇಕು. ಆಗ ಮಾತ್ರ ಆಹಾರಧಾನ್ಯದಲ್ಲಿ ಸ್ವಾವಲಂಬನೆ ಸಾಧಿಸಿ, ಹೆಚ್ಚಿನ ಆಹಾರ ಧಾನ್ಯಗಳನ್ನು ರಫ್ತು ಮಾಡಲು ಸಾಧ್ಯವಾಗುತ್ತದೆ. ಹೆಚ್ಚುತ್ತಿರುವ ದೇಶದ ಜನಸಂಖ್ಯೆಗೆ ಅನುಗುಣವಾಗಿ, ಆಹಾರ ಧಾನ್ಯಗಳ ಉತ್ಪಾದನೆಯನ್ನೂ ಹೆಚ್ಚಿಸುವ ಮೂಲಕ ದೇಶದ ಸಮಸ್ತ ಜನತೆಗೆ ಆಹಾರ ಭದ್ರತೆ ಒದಗಿಸಬೇಕು. ಆಹಾರ ಭದ್ರತೆ ಎಂದರೆ ಕೇವಲ ಭೌತಿಕ ಬದ್ಧತೆಯಷ್ಟೇ ಅಲ್ಲ; ಆರ್ಥಿಕವಾಗಿಯೂ ಎಲ್ಲರಿಗೂ ಆಹಾರಧಾನ್ಯದ ಭದ್ರತೆ ಅಗತ್ಯ. ನಮ್ಮ ವಿಜ್ಞಾನಿಗಳನ್ನು ಉತ್ತೇಜಿಸುವ ಮೂಲಕ ಈಗ ಇರುವ ತಂತ್ರಜ್ಞಾನ ಸುಧಾರಿಸುವ ಜತೆಗೆ, ಹೊಸ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಬೇಕು. ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡುವ ಜತೆಗೆ ಅಗತ್ಯವಾದ ಸಂಪನ್ಮೂಲವನ್ನು ಒದಗಿಸಬೇಕು. ಆಗ ಮಾತ್ರ ನನ್ನ ಕನಸಿನ ಭಾರತದ ಕೃಷಿಕ್ಷೇತ್ರ ಸಮೃದ್ಧವಾಗಲು ಸಾಧ್ಯ.

ನನ್ನ ಕನಸಿನ ಭಾರತ ಎಲ್ಲ ಜನರಿಗೆ ಸುಧಾರಿತ ಆರೋಗ್ಯ ಸೌಲಭ್ಯವನ್ನು ಕಲ್ಪಿಸಬೇಕು. ತಳಹಂತದಲ್ಲಿ ಕೂಡಾ ಎಲ್ಲರಿಗೂ ಉತ್ತಮ ವೈದ್ಯಕೀಯ ಸೌಲಭ್ಯ ಲಭಿಸುವಂತಾಗಬೇಕು. ಇಂದು ಬಡಜನರು ಗ್ರಾಮೀಣ ಪ್ರದೇಶದಲ್ಲಿ ದಯನೀಯ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಈ ಕಾರಣದಿಂದ ಅಕಾಲಿಕ ಮರಣದಂಥ ಸಮಸ್ಯೆಗಳು ಎದುರಾಗುತ್ತಿವೆ. ದಿವ್ಯ ಅಜ್ಞಾನ, ವೈದ್ಯರ ಲಭ್ಯತೆ ಕೊರತೆ ಮತ್ತು ಸಕಾಲಿಕವಾಗಿ ವೈದ್ಯಕೀಯ ನೆರವು ಸಿಗುವಂತಾಗಬೇಕು. ವೈದ್ಯಕೀಯ ಚಿಕಿತ್ಸೆ ದುಬಾರಿಯಾಗಿರುವುದರಿಂದ ಬಡವರು ವೈದ್ಯಕೀಯ ಸೇವೆ ಪಡೆಯಲಾಗದೇ ಜೀವವನ್ನು ಬಲಿಕೊಡುತ್ತಿದ್ದಾರೆ.

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ಭಾಗವಾಗಿ ಅತ್ಯಾಧುನಿಕ ತಂತ್ರಜ್ಞಾನ ಹಾಗೂ ವೈದ್ಯಕೀಯ ಕ್ಷೇತ್ರದ ಸಂಶೋಧನೆಗಳು ಬಂದಿವೆ. ಆದರೆ ಇವು ಕೇವಲ ಶ್ರೀಮಂತರಿಗಷ್ಟೇ ಕೈಗೆಟಗುತ್ತಿವೆ. ಸರ್ಕಾರಿ ಆಸ್ಪತ್ರೆಗಳಿಗೆ ಸರ್ಕಾರ ದುಬಾರಿ ಔಷಧಿಗಳು ಮತ್ತು ಯಂತ್ರೋಪರಣಗಳನ್ನು ಪೂರೈಸುತ್ತಿದ್ದರೂ, ಸಂಬಂಧಪಟ್ಟ ವೈದ್ಯರು ಮತ್ತು ಅಧಿಕಾರಿಗಳು ಬಣ್ಣದ ಕಾಗದಗಳಾಗಿ ಪರಿವರ್ತಿಸಿಕೊಂಡು, ತಮ್ಮ ಬ್ಯಾಂಕ್ ಬ್ಯಾಲೆನ್ಸ್‌ಗಳನ್ನಷ್ಟೇ ಹೆಚ್ಚಿಕೊಳ್ಳುತ್ತಿದ್ದಾರೆ. ಇದನ್ನು ನಿಯಂತ್ರಿಸಲು ಸಾಕಷ್ಟು ಕಾನೂನುಗಳಿದ್ದರೂ, ಅವುಗಳ ಅನುಷ್ಠಾನ ಸಮರ್ಪಕವಾಗಿ ಆಗುತ್ತಿಲ್ಲ. ಸರ್ಕಾರ ವೈದ್ಯರಿಗೆ ಸೂಕ್ತ ಸೌಲಭ್ಯಗಳನ್ನು ನೀಡುವ ಮೂಲಕ ಜನಸೇವೆಗೆ ಮನವೊಲಿಸಬೇಕು. ಆ ಮೂಲಕ ಬಡವರ ಕಲ್ಯಾಣಕ್ಕೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಇದನ್ನು ಉಲ್ಲಂಘಿಸಿದವರ ವಿರುದ್ಧ ಕಟ್ಟುನಿಟ್ಟಿನ ಕ್ರಮಕ್ಕೆ ಮುಂದಾಗಬೇಕು. ದೇಶದ ಎಲ್ಲ ನಾಗರಿಕರಿಗೆ ಸೂಕ್ತ ವೈದ್ಯಕೀಯ ಸೌಲಭ್ಯ ಮತ್ತು ಪೌಷ್ಟಿಕ ಆಹಾರವನ್ನು ಒದಗಿಸುವುದು ನನ್ನ ಕನಸಿನ ಭಾರತದ ಆದ್ಯತೆಯಾಗಬೇಕು.

"ಗೋ ಈಸ್ಟ್ ಆರ್ ವೆಸ್ಟ್; ಇಂಡಿಯಾ ಈಸ್ ಬೆಸ್ಟ್, ಪ್ರತಿಯೊಬ್ಬರೂ ಹೀಗೆ ಭಾವಿಸುವಂತಾಗಬೇಕು. ಆದರೆ ಆಂತರಿಕವಾಗಿ ಪರಿಸ್ಥಿತಿ ಏನಾಗಿದೆ? ಉಗ್ರವಾದ ದೇಶದಲ್ಲಿ ವ್ಯಾಪಕವಾಗಿದೆ. ದೇಶಾದ್ಯಂತ ಉಗ್ರರ ಜಾಲ ಹರಡಿದೆ. ಉಗ್ರರ ರಕ್ತದಾಹಕ್ಕೆ ದಿನಾಲೂ ಅಮಾಯಕ ಮಂದಿ ಬಲಿಯಾಗುತ್ತಿದ್ದಾರೆ. ಅದರಲ್ಲೂ ಮುಖ್ಯವಾಗಿ ಜಮ್ಮು ಕಾಶ್ಮೀರದಲ್ಲಿ. ಇದೇ ಪರಿಸ್ಥಿತಿ ಮುಂದುವರಿದರೆ ಒಂದು ದಿನ ನಾವು ಅಮೆರಿಕದಲ್ಲಿ 2001ರ ಸೆಪ್ಟೆಂಬರ್ 11 ರಂದು ನಡೆದ ಘಟನೆಯನ್ನು ಭಾರತದಲ್ಲೂ ನೋಡಬೇಕಾಗುತ್ತದೆ. ಭಯೋತ್ಪಾದನೆ ನಮ್ಮ ಆರ್ಥಿಕ ವ್ಯವಸ್ಥೆಯನ್ನು ಬುಡಮೇಲು ಮಾಡುವುದಷ್ಟೇ ಅಲ್ಲದೇ, ಆರ್ಥಿಕ ಹಿಂಜರಿತಕ್ಕೂ ಕಾರಣವಾಗುತ್ತಿದೆ. ಜತೆಗೆ ಹಲವು ಅಮಾಯಕ ಮಂದಿಯನ್ನೂ ನಾವು ಕಳೆದುಕೊಳ್ಳಬೇಕಾಗುತ್ತದೆ.

ನನ್ನ ಕನಸಿನ ಭಾರತದಲ್ಲಿ ಇಂಥ ಭಯೋತ್ಪಾದನೆಯನ್ನು ಬುಡಸಮೇತ ಕಿತ್ತು ಹಾಕುವ ಸಲುವಾಗಿ ಕಟ್ಟುನಿಟ್ಟಿನ ಕಾನೂನು ಜಾರಿಯಾಗಬೇಕು. ದೇಶಕ್ಕೆ ಹಿಂಬದಿಯಿಂದ ಚೂರಿಹಾಕುವ ಮಂದಿಯನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ದೇಶದ ಜನಸಾಮಾನ್ಯರು ಶಾಂತಿ ಹಾಗೂ ಸಾಮರಸ್ಯದಿಂದ ನೆಮ್ಮದಿಯ ನಿದ್ದೆ ಮಾಡುವಂತಾಗಬೇಕು. ನನ್ನ ಕನಸಿನ ಭಾರತದ ಜನತೆ ಭಯೋತ್ಪಾದನೆಯನ್ನು ಕೊಲ್ಲಲು ಸರ್ಕಾರದ ಪ್ರಯತ್ನಗಳ ಜತೆ ಕೈಜೋಡಿಸಬೇಕು. ದುಷ್ಟಶಕ್ತಿಗಳು ದೇಶದ ಮೇಲೆ ದಾಳಿ ಮಾಡುವುದನ್ನು ತಡೆಯಲು ನಿಷ್ಠ ಸೈನಿಕರ ಜತೆ ಜನಸಾಮಾನ್ಯರೂ ಕೈಜೋಡಿಸಬೇಕು.

ನನ್ನ ಕನಸಿನ ಭಾರತ ಎಲ್ಲ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸಬೇಕು. ಜತೆಗೆ ನಮ್ಮ ಸಂಸ್ಕೃತಿ ಮತ್ತು



www.shikarat.com

ಪರಂಪರೆಯನ್ನು ಸಂರಕ್ಷಿಸಬೇಕು. ಸ್ವಾತಂತ್ರ್ಯ ಬಂದು 60 ವರ್ಷ ಕಳೆದರೂ ಮಹಿಳೆಯರಿಗೆ ಸಮಾನ ಅವಕಾಶ ಸಿಕ್ಕಿಲ್ಲ ಎನ್ನುವುದು ನಾಚಿಕೆಗೇಡು. ಇಂದಿನ ತಂತ್ರಜ್ಞಾನ ಯುಗದಲ್ಲಿ ಮಹಿಳೆ ಎಲ್ಲ ಕ್ಷೇತ್ರದಲ್ಲಿ ಕೆಲಸ ಮಾಡುವಷ್ಟು ಸಾಮರ್ಥ್ಯ ಬೆಳೆಸಿಕೊಂಡಿದ್ದರೂ, ಪೈಲಟ್ ಆಗಿ ಕಾರ್ಯನಿರ್ವಹಿಸುವ ಸಾಮರ್ಥ್ಯ ಹೊಂದಿದ್ದರೂ, ಅವರ ಮೇಲೆ ಅತ್ಯಾಚಾರ, ಲೈಂಗಿಕ ಕಿರುಕುಳ, ಹಿಂಸೆ, ವರದಕ್ಷಿಣೆ ಸಾವು, ದೈಹಿಕ ಚೇಷ್ಟೆಯಂಥ ಕೃತ್ಯಗಳು ನಡೆಯುತ್ತಿವೆ. ಇದು ನಮ್ಮ ಪುರುಷಪ್ರಧಾನ ಸಮಾಜದ ವಿಕೃತ ಮನಸ್ಸಿನ ಪ್ರತಿಬಿಂಬ ಎನ್ನಬೇಕು.

ಮಹಿಳೆ ಇಂದಿಗೂ ಕೆಲವೆಡೆ ನಾಲ್ಕು ಗೋಡೆಗಳ ಮಧ್ಯೆ ಬಂಧಿಯಾಗಿಯೇ ಉಳಿದಿದ್ದು, ವಿಮೋಚನೆ ಪಡೆದಿಲ್ಲ. ಮಹಿಳೆಯರ ಯೋಚನೆಗಳು, ಆಸೆ– ಆಕಾಂಕ್ಷೆಗಳನ್ನು ಮತ್ತು ಅವರ ಕೌಶಲಗಳನ್ನು ಗೌರವಿಸುವ ಮೂಲಕ ಮತ್ತು ಗುರುತಿಸುವ ಮೂಲಕ ಸುಭದ್ರ ಭಾರತ ಕಟ್ಟಲು ಅವರ ಸೇವೆಯನ್ನು ಬಳಸಿಕೊಳ್ಳಬೇಕಾಗಿದೆ. ಮಹಿಳೆಯರ ಹಕ್ಕುಗಳನ್ನು ಕಾಪಾಡಲು ಅಗತ್ಯ ಕಾನೂನುಗಳು ಜಾರಿಯಾಗಬೇಕು. ಭಾರತ ಆಧುನೀಕತೆಯ ಮಾರ್ಗದಲ್ಲಿ ಮುನ್ನಡೆಯಬೇಕಾದರೆ, ಮಹಿಳೆಯರಿಗೆ ಸಮಾನ ಅವಕಾಶಗಳು ದೊರೆಯಬೇಕು. ದೇಶದ ಶ್ರೀಮಂತ ಸಂಸ್ಕೃತಿ ಹಾಗೂ ಪರಂಪರೆಗೆ ಧಕ್ಕೆಯಾಗದಂತೆ ಮಹಿಳೆಯನ್ನು ಗೌರವದಿಂದ ಕಾಣಬೇಕು.

ನಮ್ಮದು ಬಹುಧರ್ಮಗಳ ನಾಡು. ಜಾತ್ಯತೀತತೆ ನಮ್ಮ ಪ್ರಮುಖ ಮಂತ್ರ. ಆದರೆ ದೇಶದಲ್ಲಿ ಜಾತೀಯತೆ ಹಾಗೂ ಕೋಮು ದ್ವೇಷದ ವಿಷಬೀಜ ಬಿತ್ತುವ ಮೂಲಕ ನಾವು ನಮ್ಮ ಹಕ್ಕುಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದೇವೆ. ಇಂಥ ವಿನಾಶಕಾರಿ ಪ್ರವೃತ್ತಿಗಳು ಬೆಂಕಿಗಿಂತಲೂ ಹೆಚ್ಚು ವೇಗವಾಗಿ ಸಮಾಜದ ಸಾಮರಸ್ಯವನ್ನು ಸುಡುತ್ತಿವೆ. ಸಮಾಜದಲ್ಲಿ ಶತಮಾನಗಳಿಂದ ತುಳಿತಕ್ಕೊಳಗಾದ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೌಲಭ್ಯಗಳನ್ನು ನೀಡುವ ಜತೆಗೆ ಮೇಲ್ಜಾತಿಯ ಬಡವರಿಗೆ ಕೂಡಾ ಸೂಕ್ತ ನೆರವಿನ ಹಸ್ತ ಚಾಚಬೇಕಿದೆ. ಅಂದರೆ ಅಂಬೇಡ್ಕರ್ ಅಥವಾ ಜಗಜ್ಜೀವನರಾಂ ಅವರು ಮೀಸಲಾತಿ ವಿಚಾರದಲ್ಲಿ ದೇಶದ ದೃಷ್ಟಿಕೋನ ಬೆಳೆಸಿಕೊಂಡಿಲ್ಲ ಎಂದೇ ಹೇಳಬೇಕಾಗುತ್ತದೆ.

ದೇಶವನ್ನು ಒಂದು ಮಾದರಿ ರಾಷ್ಟ್ರವಾಗಿ ಕಟ್ಟುವ ಸಲುವಾಗಿ ಪರಸ್ಪರ ನಂಬಿಕೆಯಿಂದ, ವಿಶ್ವಾಸದಿಂದ ಶಾಂತಿ ಹಾಗೂ ಸೌಹಾರ್ದತೆಯ ಬಾಳ್ವೆ ನಡೆಸುವುದು ಅಗತ್ಯ. ಮುಂದಿನ ಭವಿಷ್ಯದಲ್ಲಿ ಇಂಥ ಮೌಲ್ಯಗಳನ್ನು ಬಿತ್ತಬೇಕಾದರೆ ನಾವು ಅದನ್ನು ಸಾಧಿಸಿ ತೋರಿಸಬೇಕು. ಅಂಥ ಕನಸನ್ನು ನಾವು ಕಂಡರೆ ಮಾತ್ರ ಅದನ್ನು ಸಾಧಿಸುವುದು ಸಾಧ್ಯವಾಗುತ್ತದೆ. ನಮ್ಮ ಕನಸು ನನಸಾಗಲು ನಾವು ಜಾಗೃತರಾಗಬೇಕಾದ ಅಗತ್ಯವಿದೆ, ಹೊಸ ಮುಂಜಾನೆಗೆ ನಾವು ತೆರೆದುಕೊಳ್ಳೋಣ, ನಮ್ಮ ಕನಸು ನನಸಾಗಿಸುವ ನಿಟ್ಟಿನಲ್ಲಿ ಪ್ರಯತ್ನಿಸೋಣ. ಎಲ್ಲರೂ ಒಟ್ಟಾಗಿ ಭಾರತವನ್ನು ಕಟ್ಟೋಣ. ಆಗ ನಮ್ಮ ದೇಶಕ್ಕಾಗಿ ತ್ಯಾಗ ಮಾಡಿದ ಜನ ನಮ್ಮನ್ನು ಮೆಚ್ಚಿಕೊಳ್ಳುತ್ತಾರೆ. ನಮ್ಮ ಸ್ವಾತಂತ್ರ್ಯ ಸೇನಾಗಿಗಳು ಹಾಗೂ ಕಾರ್ಗಿಲ್ ಯೋಧರಿಗೆ ತಲೆಬಾಗಿ ನಮಿಸೋಣ. ಅವರ ಸ್ಫೂರ್ತಿಯ ಚಿಲುಮೆ ನಮಗೆ ಮಾರ್ಗದರ್ಶಿಯಾಗಲಿ ಎಂದು ಬೇಡಿಕೊಳ್ಳೋಣ. ಅದು ಖಂಡಿತವಾಗಿಯೂ ಸಮರ್ಥ ಹಾಗೂ ಸದೃಢ ಭಾರತಕ್ಕೆ ಬುನಾದಿಯಾಗಬಲ್ಲದು.

## 21. ರಾಷ್ಟ್ರೀಯ ಏಕತೆ: ಮುಗಿಯದ ಕಥೆ

ಒಂದು ದೇಶದ ಪರಿಕಲ್ಪನೆ ಅಥವಾ ಕೆಲ ಸಾಮಾನ್ಯತೆಗಳನ್ನು ಒಳಗೊಂಡಿರುವ ಜೀವಿಗಳಿಂದ ಕೂಡಿರುವ ಭೌಗೋಳಿಕ ಘಟಕವು ಹೊಸ ಪರಿಕಲ್ಪನೆ. ಸುಮಾರು ಹತ್ತೊಂಬತ್ತನೇ ಶತಮಾನದಲ್ಲಿ ರೂಪುಗೊಂಡ ಪರಿಕಲ್ಪನೆ ಇದು. ಜಾತಿ, ಧರ್ಮಗಳ ಎಲ್ಲೆಯನ್ನು ಮೀರಿ ರಾಷ್ಟ್ರೀಯ ಪ್ರಜ್ಞೆ ಎನ್ನುವುದು ಪ್ರಬಲ ಶಕ್ತಿಯಾದಾಗ ಇದು ರೂಪುಗೊಂಡಿತು. ಒಂದು ದೇಶದ ಅಸ್ತಿತ್ವ ಎನ್ನುವುದು ಒಂದು ರಾಜಕೀಯ ಅಂಶ. ಇದು ಸಾಂಸ್ಕೃತಿಕ ಅಂಶಗಳನ್ನೂ ಒಳಗೊಂಡಿದ್ದು, ಎಲ್ಲ ನಿವಾಸಿಗಳನ್ನು ಒಂದು ರೀತಿಯಲ್ಲಿ ಭಾವನಾತ್ಮಕವಾಗಿ ಒಗ್ಗೂಡಿಸುವಂಥದ್ದು. ದೇಶ ಹಾಗೂ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ಒಟ್ಟಾಗಿ ರಾಷ್ಟ್ರೀಯ ಭಾವೈಕ್ಯ ಎನ್ನಬಹುದು.

ಒಂದು ಸಾಂಸ್ಕೃತಿಕ ಘಟಕವಾಗಿ ಭಾರತದ ಅಸ್ತಿತ್ವವನ್ನು ಸುಮಾರು ಐದು ಸಾವಿರ ವರ್ಷಗಳಿಂದ ಗಮನಿಸಬಹುದು. ಪ್ರಾಚೀನ ರಾಜರುಗಳಾದ ಅಶೋಕ, ಚಂದ್ರಗುಪ್ತ ಮೌರ್ಯ ಮೊದಲಾದವರು ರಾಜಕೀಯವಾಗಿ ಇಡೀ ಉಪಖಂಡವನ್ನು ಒಗ್ಗೂಡಿಸಿದರು. ಮುಂದೆ ಭರತವರ್ಷ ಮಹಾರಾಜನ ಹೆಸರಿನಲ್ಲಿ ಇದನ್ನು ಭಾರತ ಎಂದು ಗುರುತಿಸಲಾಯಿತು. ತನ್ನ ಭೌಗೋಳಿಕ ಗುಣಲಕ್ಷಣಗಳಿಂದಾಗಿ ಪ್ರಪಂಚದ ಇತರ ಭಾಗಗಳಿಂದ ಭಿನ್ನತೆ ರೂಢಿಸಿಕೊಂಡಿತ್ತು ಹಾಗೂ ಹೊರಜಗತ್ತಿನ ಸಂಪರ್ಕವನ್ನು ಅಷ್ಟಾಗಿ ಪಡೆದಿರಲಿಲ್ಲ. ಈ ಕಾರಣದಿಂದಾಗಿ ಅಪರೂಪದ ಹಾಗೂ ವಿಭಿನ್ನ ಸಾಂಸ್ಕೃತಿಕ ಘಟಕವಾಗಿಯೇ ಉಳಿದುಕೊಳ್ಳಲು ಸಾಧ್ಯವಾಯಿತು. ಆದರೆ ಬ್ರಿಟಿಷರು ಮತ್ತು ಅವರ ಸಾಮ್ರಾಜ್ಯಶಾಹಿ ಆಡಳಿತ ವ್ಯವಸ್ಥೆ, ಭಾರತವನ್ನು ಆಡಳಿತಾತ್ಮಕ ಹಾಗೂ ಸಾಂಸ್ಕೃತಿಕ ಘಟಕವಾಗಿ ಒಗ್ಗೂಡಿಸಿತು. ಇದರಿಂದ ಭಾರತೀಯರಲ್ಲಿ ಒಗ್ಗಟ್ಟು ಮೂಡಿ, ಸಮಾನ ಶತ್ರುವಿನ ವಿರುದ್ಧ ಸಂಘಟಿತ ಹೋರಾಟಕ್ಕೆ ವೇದಿಕೆ ಸಜ್ಜಾಯಿತು.

ಸಮಗ್ರ ಭಾರತದ ಸಂಘಟಿತ ಪ್ರಯತ್ನವಾಗಿ 1857ರ ಮೊದಲ ಸ್ವಾತಂತ್ರ್ಯ ಸಂಗ್ರಾಮ ರೂಪುಗೊಂಡಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಇಡೀ ದೇಶದ ಜನರನ್ನು ಸಂಘಟಿಸಿ ಒಗ್ಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿತು. ಮತ್ತು ದೇಶಪ್ರೇಮದ ಪ್ರಜ್ಞೆಯನ್ನು ದೇಶದ ಜನರಲ್ಲಿ ಬಡಿದೆಬ್ಬಿಸಿತು. ಇಡೀ ಭಾರತೀಯ ಜನತೆ ಸಮಾನ ಆರ್ಥಿಕ ಹಾಗೂ ರಾಜಕೀಯ ವೇದಿಕೆ ರೂಪಿಸಿಕೊಂಡಿತು. ಮಹಾತ್ಮಗಾಂಧೀಜಿಯವರ ಬರುವಿಕೆ ಇಡೀ ದೇಶಕ್ಕೆ ಸಾಮೂಹಿಕ ನಾಯಕತ್ವವನ್ನು ನೀಡಿತು. ಇಡೀ ದೇಶದ ಒತ್ತಾಸೆಯ ಫಲವಾಗಿ 1947ರಲ್ಲಿ ದೇಶ ಸ್ವತಂತ್ರಗೊಂಡಿತು.

ಸ್ವಾತಂತ್ರ್ಯ ಎನ್ನುವುದು ರಾಷ್ಟ್ರೀಯ ಭಾವೈಕ್ಯದ ಒಂದು ಮೊದಲ ಹೆಜ್ಜೆಯೇ ವಿನಃ ಇದೇ ಕೊನೆಯ ಹೆಜ್ಜೆಯಲ್ಲ. ಭಾರತದ ಸಂವಿಧಾನ ಒಂದು ಪ್ರಬಲ ಕೇಂದ್ರವನ್ನು ಸ್ಥಾಪಿಸಿದ್ದಲ್ಲದೇ, ಎಲ್ಲನಾಗರಿಕರಿಗೆ ಏಕೈಕ ನಾಗರಿಕ ಸ್ಥಾನಮಾನವನ್ನು ಕಲ್ಪಿಸಿದೆ. ದೇಶ ವಿಕಸನಗೊಳ್ಳಲು ಹಲವು ಅನುಕೂಲತೆಗಳನ್ನು ಮತ್ತು ಸೌಲಭ್ಯಗಳನ್ನು ನಮ್ಮ ಸಂವಿಧಾನ ಕಲ್ಪಿಸಿಕೊಟ್ಟಿದೆ. ಇದರ ಜತೆಗೆ ಅಲ್ಪಸಂಖ್ಯಾತರು ತಮ್ಮ ಭಾಷೆ ಹಾಗೂ ಸಂಸ್ಕೃತಿಯನ್ನು ರಕ್ಷಿಸಿಕೊಳ್ಳಲು ಎಲ್ಲಸುರಕ್ಷಾ ಸೌಲಭ್ಯವನ್ನೂ ಸಂವಿಧಾನ ಕಲ್ಪಿಸಿಕೊಟ್ಟಿದೆ. ಆದ್ದರಿಂದ ನಮ್ಮ ಸಂವಿಧಾನದ ಮೂಲತತ್ವ ಹಾಗೂ ಆಶಯವೇ ವಿವಿಧತೆಯಲ್ಲಿ ಏಕತೆ ಸಾಧಿಸುವುದು. ದೇಶದಲ್ಲಿ 500ಕ್ಕೂ ಹೆಚ್ಚು ರಾಜಮನೆತನಗಳ ಆಳ್ವಿಕೆಯಲ್ಲಿದ್ದ ಸಣ್ಣ ಪುಟ್ಟ ರಾಜ್ಯಗಳು ಸಮಗ್ರ ಭಾರತವಾಗಿ ರೂಪುಗೊಂಡಿತು. ಇದಕ್ಕೆ ದೇಶದ ಉಕ್ಕಿನ ಮನುಷ್ಯ ಎನಿಸಿಕೊಂಡ ಸರ್ದಾರ್ ವಲ್ಲಭಭಾಯಿ ಪಟೇಲರ ಕರ್ತೃತ್ವ ಶಕ್ತಿ ಕಾರಣವಾಯಿತು.'


www.shikarat.com